ఉలూపి

నాటిక



వి.వి.నాగరాజు

ವ್ಯಾಸ ಮಹರ್ಷಿಯ 'ಮಹಾಭಾರತ' ಮತ್ತು ಪಂಪ ಕವಿಯ 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿ ಚಿತ್ರಣಗೊಂಡಿದ್ದ ಅಂಬೆಯ ಪ್ರಸಂಗವನ್ನು ಆಧಾರವಾಗಿಟ್ಟುಕೊಂಡು 'ಅಂಬೆ' ನಾಟಕವನ್ನು ರಚಿಸಿದ್ದೇನೆ.

ಅಂಬೆ ನಾಟಕದ ಬಗ್ಗೆ ಅಭಿಪ್ರಾಯಗಳು

'ಅಂಬೆ' ಚೆಲುವಾದ ಪುಟ್ಟ ಕೃತಿಯಾಗಿದೆ. ಅಂಬೆಯ ಪಾತ್ರದ ಮನೋವಿಶ್ಲೇಷಣಾತ್ಮಕ ದೃಷ್ಟಿ ಮೆಚ್ಚುವಂತಹುದು. ಅಂಬೆಯ ಕಥೆಯನ್ನು ರಸಸ್ಯಂದಿಯಾಗಿ, ಉದಾತ್ತವಾಗಿ ದೃಶ್ಯರೂಪದಲ್ಲಿ ಲೇಖಕರು ಅಳವಡಿಸಿದ್ದಾರೆ. **-ಎಸ್.ವಿ. ಪರಮೇಶ್ವರ ಭಟ್ಟ**

'ಅಂಬೆ' ನಾಟಕವನ್ನು ಓದಿ ತುಂಬಾ ಹರ್ಷಿತನಾದೆ. ಸಂಭಾಷಣೆಗಳು ಬಹು ಕುಶಲವಾಗಿವೆ. ಮಾತುಗಳ ಚಕಮಕಿ ದಕ್ಷಿಣ ಕನ್ನಡದ 'ತಾಳಮದ್ದಲೆ'ಗಳನ್ನು ಹೋಲಿ ಆಕರ್ಷಕವಾಗಿವೆ.

-ಪು.ತಿ. ನರಸಿಂಹಾಚಾರ್

'ಅಂಬೆ' ನಾಟಕ ಬಲು ಸೊಗಸಾಗಿ ಬಂದಿದೆ. ಮೂಲ ವ್ಯಾಸ ಭಾರತದಿಂದ ಆಯ್ದುಕೊಂಡಿದ್ದಾದರೂ ಲೇಖಕರು ಅಲ್ಲಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡಿದ್ದಾರೆ. ಭೀಷ್ಮ-ಪರಶುರಾಮರ ವೀರರಸ ಸಂವಾದವಂತೂ ಅತ್ಯಂತ ಪ್ರಭಾವಶಾಲಿಯಾಗಿದೆ. **-ಎಂ.ಕೆ. ಇಂದಿರಾ**

ಅಂಬೆ

(ರಚನೆ : 1979)

ಸಿ.ಪಿ.ನಾಗರಾಜ

ನಾಗು ಸ್ಮಾರಕ ಪ್ರಕಾಶನ

75, ‘ಎ’ ಬ್ಲಾಕ್, 5 ನೆಯ ಕ್ರಾಸ್, ಕ್ರಿಶ್ಣ ಗಾರ್ಡನ್,

ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521.

ngy7777@gmail.com

ಪಾತ್ರವರ್ಗ

ಸತ್ಯವತಿ---ಶಂತನು ಮಹಾರಾಜನ ಹೆಂಡತಿ. ಭೀಷ್ಮರ ಚಿಕ್ಕಮ್ಮ.

ಭೀಷ್ಮ---ಶಂತನು ಮತ್ತು ಗಂಗಾದೇವಿಯ ಮಗ.

ಅಂಬೆ-ಕಾಶಿರಾಜನ ಹಿರಿಯ ಮಗಳು

ಮಾಲಿನಿ---ಅಂಬೆಯ ಆಪ್ತಸಖಿ

ಸುಮ---

ಭಾಮ--- ಸತ್ಯವತಿಯ ದಾಸಿಯರು

ನಳಿನಿ---

ಬೊಮ್ಮ---ಭೀಷ್ಮನ ಸೇವಕ

ವೀರಸೇನ---ಭೀಷ್ಮನ ರಥದ ಸಾರಥಿ

ಪರಶುರಾಮ---ಭೀಷ್ಮನ ಗುರು

ಅಂಬೆ

ಅಂಕ - ಒಂದು

ದೃಶ್ಯ-1

[ಹಸ್ತಿನಾಪುರದಲ್ಲಿ ರಾಜಮಾತೆ ಸತ್ಯವತಿದೇವಿಯ ಅಂತಃಪುರದ ಕೊಠಡಿಯೊಂದರಲ್ಲಿ ಮೂವರು ಕಾಶಿರಾಜ ಪುತ್ರಿಯರು ಬಿಕ್ಕಿ ಬಿಕ್ಕಿ ಅಳುತ್ತಿದ್ದಾರೆ. ಅವರ ಆಪ್ತಸಖಿಯಾದ ಮಾಲಿನಿಯು ಅವರನ್ನು ಸಮಾಧಾನಗೊಳಿಸುವುದರಲ್ಲಿ ಮಗ್ನಳಾಗಿದ್ದಾಳೆ. ಅವರೆಲ್ಲರ ಮುಖಗಳು ಭೀತಿಯಿಂದ ಕಂಗೆಟ್ಟಿವೆ. ರಾಜಮಾತೆ ಸತ್ಯವತಿ ಪ್ರವೇಶಿಸುತ್ತಾಳೆ.]

ಸತ್ಯವತಿ : ಅಪರಿಚಿತ ಸ್ಥಳದಲ್ಲಿ ಹಾನಿಯುಂಟಾಗುವುದೆಂದು ಕಳವಳಿಸಬೇಡಿ. ಇಲ್ಲಿ ನಿಮ್ಮ ಘನತೆಗೆ ಕುಂದುಂಟಾಗುವ ಯಾವ ಅನುಚಿತ ಕಾರ್ಯವೂ ಯಾರಿಂದಲೂ ಸಂಭವಿಸುವುದಿಲ್ಲ.

ಮಾಲಿನಿ : ಅಕಾರ್ಯವನ್ನೆಸಗಿಯೇ ಅಪಹರಿಸಿ ತಂದಿರುವ ಎಡೆಯಲ್ಲಿ ಆಪತ್ತಿಲ್ಲವೆಂದರೆ, ಅದಕ್ಕಿಂತಲೂ ಪರಿಹಾಸ್ಯ ಮತ್ತೊಂದಿಲ್ಲ.

ಸತ್ಯವತಿ : ಯಾವ ಆಪತ್ತು ನಿಮಗೆ ತಟ್ಟದಂತೆ ನಾನು ನೋಡಿಕೊಳ್ಳುತ್ತೇನೆ, ನನ್ನ ಮಾತಿನಲ್ಲಿ ನಂಬಿಕೆಯಿರಲಿ.

ಮಾಲಿನಿ : ನಂಬಿಕೆಗೆ ಅನರ್ಹವಾದ ಎಡೆಯಲ್ಲಿ ಅಮೃತವೂ ವಿಷದಂತೆ ಭಾಸವಾಗುವುದಿಲ್ಲವೇ?

ಸತ್ಯವತಿ : ಮಾತಿಗೆ ಮಾತನ್ನು ಒಡ್ಡುವುದರಲ್ಲಿ ನಿಪುಣೆಯಾದ ನೀನಾರು?.. ನಿನ್ನ ಹೆಸರೇನು?

ಮಾಲಿನಿ : ಅದರಿಂದ ತಮಗಾಗುವ ಪ್ರಯೋಜನವೇನು?

ಸತ್ಯವತಿ : ಹೆಚ್ಚಿನ ಯಾವ ಲಾಭವಲ್ಲದಿದ್ದರೂ ಕುತೂಹಲವಾದರೂ ತಣಿಯುವುದಿಲ್ಲವೇ?

ಮಾಲಿನಿ : ನನ್ನ ಹೆಸರು ಮಾಲಿನಿ. ದೌರ್ಭಾಗ್ಯವತಿಯರಾದ ಈ ಕಾಶಿರಾಜ ಪುತ್ರಿಯರ ಆಪ್ತ ಸಖಿ.

ಸತ್ಯವತಿ : ಹಸ್ತಿನಾಪುರದಂಥ ಸೌಭಾಗ್ಯದ ನೆಲೆಯಲ್ಲಿರುವ ರಾಜಪುತ್ರಿಯರನ್ನು ಏಕೆ ಹಾಗೆಂದು ಕರೆಯುವೆ?

ಮಾಲಿನಿ : ಚಿನ್ನದ ಕತ್ತಿಯಿಂದ ಇರಿದರೆ ನೋವಾಗುವುದಿಲ್ಲವೇ?

ಸತ್ಯವತಿಯ ದಾಸಿ: ಅಬ್ಬಾ! ಎಂಥಾ ಮಾತಿನ ಮಲ್ಲಿಯೇ ನೀನು? ರಾಜಮಾತೆಯವರ ಮುಂದೆಯೂ ಮಾತಿನ ಮೇಲೆ ನಿಗವಿಲ್ಲವಲ್ಲ.

ಮಾಲಿನಿ : [ತಾನು ಇದುವರೆಗೂ ಮಾತನಾಡುತ್ತಿದ್ದುದು ರಾಜಮಾತೆಯವರೊಡನೆ ಎಂಬುದನ್ನು ಅರಿತ ಕೂಡಲೇ ಒಂದು ಬಗೆಯ ಗೌರವ ಭಾವನೆಯಿಂದ]
ಕ್ಷಮಿಸಬೇಕು ದೇವಿ. ನಾನಾಡಿದ ನುಡಿಗಳು ಒರಟಾಗಿದ್ದರೆ ಬೇಸರಪಟ್ಟುಕೊಳ್ಳಬೇಡಿ.

ಸತ್ಯವತಿ : ನಿನ್ನಂಥ ಸಖಿ ಬಳಿಯಲ್ಲಿದ್ದರೆ ಕಾಲದ ಪರಿವೆಯೇ ತಿಳಿಯದು. ನಿನ್ನ ಕಂಠ ಕೋಗಿಲೆಯ ಧ್ವನಿಯನ್ನು ಅಣಕಿಸುತ್ತದೆ. ನಿನ್ನ ಮಾತಿನ ಚಾತುರ್ಯ ಹಗೆಗಳನ್ನೂ ಆತ್ಮೀಯರನ್ನಾಗಿಸುತ್ತದೆ.

ಮಾಲಿನಿ : ದೇವಿ, ತಮ್ಮ ಅಭಿಮಾನಕ್ಕೆ ನಾನು ಚಿರಋಣಿ. ಆದರೆ........

ಸತ್ಯವತಿ : (ಮುಗುಳ್ನಗುತ್ತಾ)
'ಆದರೆ' ಎಂಬ ಈ ನಿನ್ನ ಉದ್ಗಾರ, ಇನ್ನಾವ ಹೊಸ ಬಗೆಯ ಮಾತಿನ ಮೋಡಿಗೆ ನಾಂದಿಯಾಗುವುದು ಮಾಲಿನಿ?

ಮಾಲಿನಿ : ಧರ್ಮದ ಗೆರೆಯನ್ನು ದಾಟಿ ಬಾಳುತ್ತಿರುವ ಮಗನ ತಾಯಿ ನೀವಾಗಿರುವಿರಲ್ಲ ಎಂಬ ವ್ಯಥೆ ನನ್ನನ್ನು ಕಾಡುತ್ತಿದೆ.

ಸತ್ಯವತಿ : ಅಂದರೆ ನಿನ್ನ ಮಾತಿನ ಅರ್ಥ. ನನ್ನ ಮಗ...

ಮಾಲಿನಿ : ಧರ್ಮಬಾಹಿರರಲ್ಲವೇ ದೇವಿ?

ಸತ್ಯವತಿಯ ದಾಸಿ: ನಾಲಿಗೆಯ ಮೇಲೆ ಹತೋಟಿಯಿರಲಿ. ಮಾತೆಯವರ ಮೆಚ್ಚುಗೆಗೆ ಪಾತ್ರಳಾಗಿದ್ದೇನೆಂದು ಬಾಯಿಗೆ ಬಂದಂತೆ ಹರಟಬೇಡ.

ಸತ್ಯವತಿ : [ದಾಸಿಯತ್ತ ತಿರುಗಿ, ಮಧ್ಯೆ ಪ್ರವೇಶಿಸಬೇಡವೆಂದು ಕಣ್ಸನ್ನೆಯಿಂದ ಸೂಚಿಸುತ್ತಾಳೆ.]
ಮಾಲಿನಿ, ನನ್ನ ಮಗ ಧರ್ಮವಿರೋಧಿಯಾದ ಕಾರ್ಯವನ್ನು ಕನಸಿನಲ್ಲೂ ಮಾಡುವವನಲ್ಲ.

ಮಾಲಿನಿ : ಹಾಡುಹಗಲಿನಲ್ಲಿ ಅನ್ಯರ ವಸ್ತುವನ್ನು ಅಪಹರಿಸಿದರೆ, ಅದು ಕಳ್ಳತನವಲ್ಲವೇ ದೇವಿ?

ಸತ್ಯವತಿ : ನಿನ್ನ ಒಗಟನ್ನು ಬಿಡಿಸಿ ಹೇಳು.

ಮಾಲಿನಿ : ಸ್ವಯಂವರ ವೇದಿಕೆಯಲ್ಲಿ ವರಣಮಾಲೆಯನ್ನು ಹಿಡಿದು ನಿಂತಿದ್ದ ಮದುವಣಗಿತ್ತಿಯರನ್ನು ಬಲಾತ್ಕಾರವಾಗಿ ಅಪಹರಿಸಿ ತಂದುದು ಸರಿಯೇ? ಹೂವಿನ ರಾಶಿ ಹರಡಿದ್ದ ಮದುಮಕ್ಕಳ ಮಂಗಳ ಮಂಟಪವನ್ನು, ಕತ್ತಿಯ ಬಲದಿಂದ ಕೆಡವಿ, ರಕ್ತದ ಚೆಲ್ಲಾಟವಾಡಿ, ಗೋಳಿನ ಬೀಡನ್ನಾಗಿ ಮಾಡಿ ಬಂದುದು ಯಾವ ಧರ್ಮ?

ಸತ್ಯವತಿ : (ಮೌನವಾಗುತ್ತಾಳೆ)

ಮಾಲಿನಿ : ಹೆತ್ತ ತಂದೆಯನ್ನು ಸದೆಬಡಿದು, ಅವನ ಕಣ್ಣೆದುರಿನಲ್ಲೇ ಹೆಣ್ಣು ಮಕ್ಕಳನ್ನು ಎಳೆತಂದಿದ್ದು ಧರ್ಮನಿಷ್ಠವಾದ ಕಾರ್ಯವೇ?
[ಆವೇಶದ ತೀವ್ರತೆಯಿಂದ ಧ್ವನಿ ಕಂಪಿಸತೊಡಗುತ್ತದೆ]

ಸತ್ಯವತಿ : ಮಾಲಿನಿ, ನಿನ್ನ ನುಡಿಗಳಲ್ಲಿ ಸತ್ಯಾಂಶವಿದ್ದರೂ, ಈ ರೀತಿ ಮಾಡಿರುವ ಭೀಷ್ಮನಲ್ಲಿ ಯಾವುದೋ ಮಹತ್ತರವಾದ ದೂರದೃಷ್ಟಿಯಿರಲೇಬೇಕು. ಆತ ಧರ್ಮದಲ್ಲಿ ಶ್ರದ್ಧೆಯುಳ್ಳವನು.

ಮಾಲಿನಿ : ಅಬಲೆಯರನ್ನು ಎಳೆತರುವುದು ಧರ್ಮಶ್ರದ್ಧೆಯೇ?

ಸತ್ಯವತಿ : (ಸ್ವಲ್ಪ ಕೋಪದಿಂದ)
ಮಾಲಿನಿ, ಭೀಷ್ಮನ ವ್ಯಕ್ತಿತ್ವವನ್ನು ಅಲ್ಲಗಳೆಯುವಂಥ ಸಾಹಸಕ್ಕೆ ತೊಡಗಬೇಡ. ಅಪಹರಿಸಿ ತಂದ ನಿಮ್ಮನ್ನು ನನ್ನ ಅಂತಃಪುರದಲ್ಲಿ ಇರಿಸಿರುವುದೇ ಹೆಣ್ಣುಮಕ್ಕಳ ಬಗೆಗೆ ಆತನಿಗಿರುವ ಗೌರವಕ್ಕೆ ಸಾಕ್ಷಿಯಾಗಿದೆ.

ಮಾಲಿನಿ : ಹಾಗಾದರೆ ಯಾವ ಕಾರ್ಯಸಾಧನೆಗಾಗಿ ನಮ್ಮ ರಾಜಪುತ್ರಿಯರನ್ನು ಇಂತಹ ಸಂಕಟಕ್ಕೆ ಒಡ್ಡಿದ್ದಾರೆ?

ಸತ್ಯವತಿ : ನಿನಗೆ ಸಮಂಜಸವಾದ ಉತ್ತರವನ್ನು ನಾನೀಗ ನೀಡಲಾರೆ. ಕಾಶಿ ರಾಜ್ಯದತ್ತ ಹೋಗಿ ಬರುವೆನೆಂದು ಆತುರಾತುರದಲ್ಲಿ ಹೇಳಿ ಹೋದ ಭೀಷ್ಮ, ಹಿಂತಿರುಗಿ ಬಂದ ವಿಷಯ ಇದೀಗ ತಾನೆ ದಾಸಿಯರಿಂದ ತಿಳಿಯಿತು. ನನ್ನ ಅಂತಃಪುರದಲ್ಲಿ ಕಾಶಿರಾಜಪುತ್ರಿಯರಿದ್ದಾರೆ ಎಂಬ ಸುದ್ದಿ ಕೇಳಿ ಇತ್ತ ಬಂದೆನು. ಇನ್ನೂ ನನ್ನ ಪುತ್ರನ ಭೇಟಿಯಾಗಿಲ್ಲ.

ಮಾಲಿನಿ : (ದೈನ್ಯವದನಳಾಗಿ)

ದೇವಿ, ನಿಮ್ಮಲ್ಲಿ ಕೈ ಮುಗಿದು ಪ್ರಾರ್ಥಿಸಿಕೊಳ್ಳುತ್ತೇನೆ. ನಮ್ಮ ರಾಜಪುತ್ರಿಯರ ಬಾಳನ್ನು ಹೊಸಕಿ ಹಾಕುವಂಥ ಯಾವ ಕಾರ್ಯವೂ ಸಂಭವಿಸದಿರಲಿ. ಅರಳಬೇಕಾದ ಮೊಗ್ಗು ಬಾಡದಿರಲಿ.

ಸತ್ಯವತಿ : ಇಲ್ಲ ಮಾಲಿನಿ, ಖಂಡಿತ ಇಲ್ಲ. ಹೂವನ್ನು ಹೊಸಕಿ ಹಾಕುವಂಥ ನಿಷ್ಕರುಣರು ನಾವಲ್ಲ. ಧೈರ್ಯದಿಂದಿರಿ, ಚಿಂತಿಸಬೇಡಿ. ನೀವಿನ್ನು ವಿಶ್ರಮಿಸಿಕೊಳ್ಳಿ.

(ರಾಜಪುತ್ರಿಯರ ಕಡೆಗೆ ಕಣ್ಣು ಹಾಯಿಸಿ ಧೈರ್ಯ ಹೇಳುತ್ತಾಳೆ. ಆದರೆ ಸತ್ಯವತಿಯ ಸಮಾಧಾನದ ನುಡಿಗಳನ್ನು ಕೇಳುತ್ತಿದ್ದಂತೆ, ರಾಜಪುತ್ರಿಯರ ದುಃಖ ಇಮ್ಮಡಿಸಿ ಮತ್ತಷ್ಟು ಬಿಕ್ಕಿ ಬಿಕ್ಕಿ ಅಳಲಾರಂಭಿಸುತ್ತಾರೆ. ಆ ದೃಶ್ಯ ಸತ್ಯವತಿಯ ಹೃದಯವನ್ನು ಹಿಂಡಿದಂತಾಗುತ್ತದೆ. ಧರ್ಮಸಂಕಟದ ಬೇಗೆಯಲ್ಲಿ ಬೇಯುತ್ತಾ ಸತ್ಯವತಿ ಅಲ್ಲಿಂದ ತೆರಳುತ್ತಾಳೆ.)

ದೃಶ್ಯ - 2

[ಅರಮನೆಯಲ್ಲಿನ ಒಂದು ಕೊಠಡಿ. ಆಸನವೊಂದರಲ್ಲಿ ಭೀಷ್ಮರು ಕುಳಿತಿದ್ದಾರೆ. ಸತ್ಯವತಿಯು ಆಗಮಿಸಿದ್ದನ್ನು ಕಂಡ ಕೂಡಲೇ ಎದ್ದು ನಿಂತು ತಾಯಿಯನ್ನು ಪ್ರೀತಿಯಿಂದ ಆಹ್ವಾನಿಸುತ್ತಾರೆ.]

ಭೀಷ್ಮ : ಇತ್ತ ಬನ್ನಿ ಚಿಕ್ಕಮ್ಮ. ತಮಗಾಗಿ ಬಹು ಹೊತ್ತಿನಿಂದಲೂ ಕಾಯುತ್ತಿದ್ದೇನೆ.

ಸತ್ಯವತಿ : ನಿನ್ನನ್ನೇ ಕಾಣಬೇಕೆಂಬ ಆತುರದಿಂದ ನಾನೂ ಬಂದಿದ್ದೇನೆ.

ಭೀಷ್ಮ : ಅಷ್ಟೊಂದು ತುರ್ತಾದ ಕಾರ್ಯವೇನು ಚಿಕ್ಕಮ್ಮ?

ಸತ್ಯವತಿ : ನೀನು ವಯಸ್ಸಿನಲ್ಲಿ ಕಿರಿಯವನಾಗಿದ್ದರೂ, ಜ್ಞಾನದಲ್ಲಿ ಹಿರಿಯವನಾಗಿದ್ದೀಯೆ. ನಿನಗೆ ನಾನು ಧರ್ಮದ ಸ್ವರೂಪವನ್ನು ತಿಳಿಸಲು ಶಕ್ತಳಲ್ಲ. ಆದರೂ......

ಭೀಷ್ಮ : ತಮ್ಮ ಮನದ ಅಭಿಪ್ರಾಯವೇನೆಂಬುದನ್ನು ಸ್ಪಷ್ಟಪಡಿಸಿ.

ಸತ್ಯವತಿ : ಭೀಷ್ಮ, ಅಬಲೆಯರನ್ನು ಆಕ್ರಮಣಮಾಡಿ, ಅಪಹರಿಸಿ ತರಬೇಕಾದ ಅಗತ್ಯವೇನಿತ್ತು? ಅವರ ಮೂಕವೇದನೆಯನ್ನು ಕಂಡು ನನ್ನ ಕರುಳು ಕಿತ್ತು ಬಂದಂತಾಗಿದೆ. ನಿನ್ನ ಈ ವರ್ತನೆಗೆ ಕಾರಣವೇನು?

ಭೀಷ್ಮ : ಕ್ಷಮಿಸಿ ಚಿಕ್ಕಮ್ಮ, ರಾಜಕಾರಣದಲ್ಲಿ ಅನ್ಯರಿಗೆ ನೋವುಂಟಾಗುವ ಕಾರ್ಯವನ್ನು ಕೆಲವೊಮ್ಮೆ ಅನಿವಾರ್ಯವಾಗಿ ಮಾಡಬೇಕಾಗುತ್ತದೆ.

ಸತ್ಯವತಿ : (ಸ್ವಲ್ಪ ಕೋಪದಿಂದ)
ಹಾಗೆಂದು ಅಧಿಕಾರಬಲದಿಂದ, ತೋಳ್ಬಲದಿಂದ ಧರ್ಮವಿರುದ್ಧವಾದ ಕಾರ್ಯವನ್ನು ಎಸಗಬಹುದೇ?

ಭೀಷ್ಮ : ಈ ಘಟನೆ ನಿಮ್ಮ ಮನಸ್ಸಿಗೆ ತೀವ್ರವಾದ ನೋವನ್ನುಂಟು ಮಾಡಿದ್ದರೂ, ಅದರ ಹಿಂದಿನ ಆಶಯವನ್ನು ಅರಿತಾಗ, ನೀವು ಸಂತೋಷಗೊಳ್ಳುವಿರೆಂದೇ ಭಾವಿಸಿದ್ದೇನೆ.

ಸತ್ಯವತಿ : ಅನ್ಯರನ್ನು ಕಣ್ಣೀರಿನಲ್ಲಿ ಕೈ ತೊಳಿಸಿ, ಅದಾವ ಬಗೆಯ ಆನಂದವನ್ನು ನಾವು ಪಡಬಹುದು.

ಭೀಷ್ಮ : ಯಾರ ಅಳುವೂ, ಯಾರ ನಗುವೂ ಈ ಪ್ರಪಂಚದಲ್ಲಿ ಶಾಶ್ವತವಲ್ಲ ಚಿಕ್ಕಮ್ಮ. ಎಲ್ಲವೂ ಒಂದೊಂದು ಕ್ಷಣದ ಆಟಗಳಷ್ಟೆ.

ಸತ್ಯವತಿ : ನಿನ್ನ ಮಾತಿನ ಆಳವನ್ನು ಅರಿಯುವಷ್ಟು ಶಕ್ತಿ ನನಗಿಲ್ಲ.... ನೀನು ತಂದಿರುವ ಆ ಹೆಣ್ಣುಗಳ ಗತಿಯೇನೆಂಬುದನ್ನು ತಿಳಿಸುವೆಯಾ?

ಭೀಷ್ಮ : ತಮ್ಮ ಸೊಸೆಯರನ್ನಾಗಿ ಪಡೆಯಲಿದ್ದೀರಿ ಚಿಕ್ಕಮ್ಮ.

ಸತ್ಯವತಿ : ಏನೆಂದೆ?

ಭೀಷ್ಮ : ವಿಚಿತ್ರವೀರ್ಯನ ಕೈ ಹಿಡಿದು ರಾಣಿಯರಾಗುವ ಸೌಭಾಗ್ಯ ಅವರದಾಗಿದೆ.

ಸತ್ಯವತಿ : ಹಾಗಿದ್ದರೆ ಸ್ವಯಂವರ ಮಂಟಪಕ್ಕೆ ರಾಜಕುಮಾರನನ್ನೇ ಕಳುಹಿಸ ಬಹುದಾಗಿತ್ತು!

ಭೀಷ್ಮ : ರಾಜಕಾರಣದ ಒಳಸಂಚುಗಳನ್ನು ತಿಳಿಯದೆ ನೀವು ಮುಗ್ಧ ಮನಸ್ಸಿನಿಂದ ಮಾತನಾಡುತ್ತಿದ್ದೀರಿ.

ಸತ್ಯವತಿ : ಅಂದರೆ....ನಿನ್ನ ಮಾತನ್ನು ವಿವರಿಸಿ ಹೇಳು.

ಭೀಷ್ಮ : ಸುತ್ತಮುತ್ತಲಿನ ನೂರಾರು ರಾಜರಿಗೆ ಸ್ವಯಂವರದ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದ ಕಾಶಿರಾಜನ ದೃಷ್ಟಿಯಲ್ಲಿ ಹಸ್ತಿನಾಪುರದ ಅರಸು ಆಹ್ವಾನ ಯೋಗ್ಯನಾಗಿರಲಿಲ್ಲವಂತೆ... ಆತ ನಮ್ಮ ರಾಜರಿಗೆ ಆಹ್ವಾನವನ್ನೇ ನೀಡದಿದ್ದಾಗ ಅಲ್ಲಿಗೆ ಕಳುಹಿಸುವುದು ಹೇಗೆ? ಚಿಕ್ಕಮ್ಮ.

ಸತ್ಯವತಿ : ನೀಡದಿರಲು ಕಾರಣ!

ಭೀಷ್ಮ : (ಹೇಳಲು ಸ್ವಲ್ಪ ಹಿಂಜರಿಯುತ್ತಾನೆ)

ಸತ್ಯವತಿ : ಚಂದ್ರವಂಶದ ಅರಸನನ್ನು ಕಡೆಗಣಿಸುವುದಕ್ಕೆ ಕಾರಣವೇನಂತೆ? ನನ್ನ ಮಗನಲ್ಲಿ ಯಾವ ಕುಂದನ್ನು ಕಂಡನಂತೆ?

ಭೀಷ್ಮ : ಅತಿಯಾದ ಊಹಾಪೋಹದಿಂದ ಕೆಟ್ಟ ಕಲ್ಪನೆಯೊಂದನ್ನು ಕಟ್ಟಿಕೊಂಡು ಆತ ವಿಚಿತ್ರವೀರ್ಯನನ್ನು ಕಡೆಗಣಿಸಿದನೆಂದು ಗೂಢಚಾರರಿಂದ ನಮಗೆ ತಿಳಿದು ಬಂದಿತು.

ಸತ್ಯವತಿ : ಅದೇನೆಂಬುದನ್ನು ಬೇಗ ಹೇಳು.

ಭೀಷ್ಮ : ಕಾರಣವನ್ನು ತಿಳಿದು ತಾಯ ಕರುಳಿಗೆ ನೋವಾಗುವುದೇನೋ ಎಂಬ ಶಂಕೆ ನನ್ನನ್ನು ಕಾಡುತ್ತಿದೆ.

ಸತ್ಯವತಿ : ನೋವು, ಜೀವನದ ಅನಿವಾರ್ಯ ಅಂಗವಲ್ಲವೇ, ಭೀಷ್ಮ. ಅದೇನೆಂದು ಹೇಳು.

ಭೀಷ್ಮ : "ವಿಚಿತ್ರವೀರ್ಯನ ಅಣ್ಣ ಚಿತ್ರಾಂಗದನು ಗಂಧರ್ವರೊಡನೆ ನಡೆದ ಯುದ್ಧದಲ್ಲಿ ಅಕಾಲಮರಣಕ್ಕೆ ತುತ್ತಾಗಿರುವುದರಿಂದ, ಆತನ ತಮ್ಮನಾದ ವಿಚಿತ್ರವೀರ್ಯನೂ ಇಂದಲ್ಲ ನಾಳೆ ಅತ್ಯಲ್ಪ ಕಾಲದಲ್ಲೇ ಗಂಧರ್ವರ ಕೋಪಕ್ಕೆ ಬಲಿಯಾಗಬೇಕಾಗುತ್ತದೆ. ಆದ್ದರಿಂದ ದೈವಕೋಪಕ್ಕೆ ಗುರಿಯಾಗಿರುವ ರಾಜವಂಶಕ್ಕೆ ನನ್ನ ಮಕ್ಕಳನ್ನು ಕೊಡುವುದು ಉಚಿತವಲ್ಲವೆಂದು" ನಿರಾಕರಿಸಿದನಂತೆ.

ಸತ್ಯವತಿ : ನನ್ನ ಮಗನ ಆಯುಷ್ಯವನ್ನೇ ಕಿರಿದೆಂದು ಭಾವಿಸಿದನೆ ಪಾಪಿ.

ಭೀಷ್ಮ : ತನ್ನ ಹೆಣ್ಣು ಮಕ್ಕಳ ಮೇಲಣ ವ್ಯಾಮೋಹ ಅದಕ್ಕೆ ಕಾರಣವಿರಬೇಕು.

ಸತ್ಯವತಿ : ತಮ್ಮ ಮಕ್ಕಳ ಬಗ್ಗೆ ಇರುವ ಮೋಹದಿಂದ ಅನ್ಯರ ಮಕ್ಕಳನ್ನು ಕಡೆಗಣಿಸುವುದು ಸರಿಯೇ?

ಭೀಷ್ಮ : ಆದ್ದರಿಂದಲೇ ಅವನಿಗೆ ತಕ್ಕ ಬುದ್ಧಿಯನ್ನು ಕಲಿಸಲೆಂದು ಈ ಕಾರ್ಯವನ್ನು ಎಲ್ಲರೂ ನೆರೆದಿದ್ದ ಸ್ವಯಂವರ ಮಂಟಪದಲ್ಲಿ ಮಾಡಬೇಕಾಯಿತು ಚಿಕ್ಕಮ್ಮ.

ಸತ್ಯವತಿ : ನಿನ್ನ ಶೌರ್ಯಪ್ರದರ್ಶನ ನಮ್ಮ ರಾಜವಂಶದ ಘನತೆಯನ್ನು ಎತ್ತಿ ಹಿಡಿದಿದೆ.... ಆದರೆ ಮುಗ್ಧೆಯರ ಬಾಳನ್ನು ಸಂಕಟಕ್ಕೀಡು ಮಾಡಿರುವೆಯಲ್ಲಾ?

ಭೀಷ್ಮ : ತಂದೆ ಮಾಡಿದ ತಪ್ಪಿಗೆ ಮಕ್ಕಳು ಪಾಲುದಾರರಾಗಬೇಕಲ್ಲವೇ? ಚಿಕ್ಕಮ್ಮ.

ಸತ್ಯವತಿ : [ಏನನ್ನೋ ನೆನೆದುಕೊಂಡು, ವಿಷಾದಪೂರ್ಣ ನಗೆ ನಕ್ಕು ಸುಮ್ಮನಾಗುತ್ತಾಳೆ.]

ಭೀಷ್ಮ : ಆದಷ್ಟು ಶೀಘ್ರದಲ್ಲಿಯೇ ಮಂಗಳಮಂಟಪದಲ್ಲಿ ಮದುಮಕ್ಕಳನ್ನು ಸಿಂಗರಿಸಲು ಅನುಮತಿ ನೀಡಿ.

ಸತ್ಯವತಿ : ನಿನ್ನ ಆತುರಕ್ಕಿಷ್ಟು ಕಡಿವಾಣ ಹಾಕಿ, ನನ್ನದೊಂದು ಮಾತನ್ನು ನಡೆಸಿಕೊಡುವೆಯಾ?

ಭೀಷ್ಮ : ಏನೆಂಬುದನ್ನು ತಿಳಿಸಿ.

ಸತ್ಯವತಿ : ಆ ರಾಜಪುತ್ರಿಯರ ಅಭಿಪ್ರಾಯವನ್ನೊಮ್ಮೆ ಕೇಳೋಣ. ಅವರ ಸಮ್ಮತಿಯೂ ಮುಖ್ಯವಲ್ಲವೇ?

ಭೀಷ್ಮ : ತಮ್ಮ ಇಚ್ಛೆಯಂತೆಯೇ ಆಗಲಿ.

ಸತ್ಯವತಿ : ನನ್ನ ನೂರು ಜನ್ಮದ ಪುಣ್ಯಫಲದಿಂದಲೇ ನಿನ್ನಂಥ ಮಗನನ್ನು ಪಡೆದಿರುವೆ.

ಭೀಷ್ಮ : ಇದೇನು ಚಿಕ್ಕಮ್ಮ, ನಿಂದಿಸಲೆಂದು ಬಂದವರು ಹೊಗಳಿಬಿಟ್ಟಿರಲ್ಲ!

ಸತ್ಯವತಿ : ನಿನ್ನ ಗುಣ ಅಂತಹುದಪ್ಪ.

[ಇಬ್ಬರೂ ಪರಸ್ಪರ ಸಂತೋಷಚಿತ್ತರಾಗಿ ಅಲ್ಲಿಂದ ನಿರ್ಗಮಿಸುತ್ತಾರೆ.]

ದೃಶ್ಯ - 3

[ಅಂತಃಪುರಕ್ಕೆ ಹೊಂದಿಕೊಂಡಿರುವ ಉದ್ಯಾನವೊಂದರಲ್ಲಿ ಹಸಿರು ಹುಲ್ಲಿನ ಹಾಸಿನ ಮೇಲೆ ಇಬ್ಬರು ಸಖಿಯರು ಮೌನದಿಂದ ಕುಳಿತ್ತಿದ್ದಾರೆ. ಅವರ ಮುಖದ ಮೇಲೆ ಯಾವುದೋ ಚಿಂತೆ ಕವಿದಿದೆ. ಆಗ ಅಲ್ಲಿಗೆ ಮತ್ತೊಬ್ಬಳು ಆಗಮಿಸುತ್ತಾಳೆ]

ಸುಮ : ಏನ್ರೇ, ಮೂಗಿಯರಂತೆ ಕುಳಿತಿದ್ದೀರಿ! ನಿಮಗೂ ಮದುವೆ ಹುಚ್ಚು ಹಿಡಿಯಿತೇನು? (ಸುಮ ಮಾಡಿದ ಹಾಸ್ಯದಿಂದ ಅವರ ಮುಖಗಳಲ್ಲಿ ನಗೆ ಚಿಮ್ಮುವುದಿಲ್ಲ. ಎಲ್ಲರೂ ಮ್ಲಾನವದನರಾಗಿರುತ್ತಾರೆ.)

ಸುಮ : ಇವತ್ತೇನಾಗಿದೆ ನಿಮಗೆ? ದೆವ್ವ ಹಿಡಿದವರಂತೆ ಕುಳಿತಿದ್ದೀರಲ್ಲ?
(ಭಾಮಳ ಕಡೆಗೆ ತಿರುಗಿ)
ಲೇ ಭಾಮ, ನೀನೂ ಹೀಗೆ ನಾಲಿಗೆ ಬಿಗಿಹಿಡಿದಿರಬೇಕಾದರೆ, ಈ ದಿನ ಖಂಡಿತ ಪ್ರಳಯ ಆಗುತ್ತೆ ಕಣೆ.

ಭಾಮ : ಸುಮ್ನಿರೆ ಸುಮ, ಎಲ್ಲಾ ಸಮಯದಲ್ಲೂ ನೀನೊಂದೇ ರೀತಿ ಆಡ್ತೀಯಮ್ಮ.

ಸುಮ : (ಅವರತ್ತ ಮತ್ತೊಮ್ಮೆ ಕಣ್ಣಾಡಿಸಿ, ಸ್ವಲ್ಪ ಗಾಬರಿಯಿಂದ)
ಏನ್ರೇ? ಯಾಕೆ ಹೀಗಿದ್ದೀರಾ?....ನಿಮ್ಮನ್ನು ನೋಡುದ್ರೆ, ನಂಗ್ಯಾಕೋ ಒಂದು ರೀತಿ ಗಾಬರಿ ಆಗುತ್ತಪ್ಪ.

ನಳಿನಿ : ಏನೂ ಇಲ್ಲ ಬಾರೆ. ಯಾಕೆ ಈ ರೀತಿ ಚಡಪಡಿಸ್ತೀಯಾ?

ಸುಮ : ನೀವೆಲ್ಲಾ ಮಂಕು ಹಿಡಿದವರಂತೆ ಕುಳಿತಿದ್ದರೆ, ನಾನು ಇನ್ನೇನ್ ತಾನೆ ಮಾಡ್ಬೇಕು?

ನಳಿನಿ : ಮಂಕು ನಮಗೆ ಮಾತ್ರವಲ್ಲ; ಎಲ್ಲರಿಗೂ ಹಿಡಿದಿದೆ.

ಸುಮ : ಥೂ ಹೋಗ್ರೆ, ಬರೀ ಒಗಟನ್ನೇ ಆಡ್ತಾ ಇದ್ದೀರಿ. ನಿಮಗೆಲ್ಲಾ ಬಹಳ ಜಂಭ ಕಣ್ರೆ. ಮೂರು ದಿನ ಊರಿನಲ್ಲಿ ಇಲ್ಲದಿದ್ದಕ್ಕೆ ನನ್ನನು ಹೊಸಬಳೆಂದೇ ಭಾವಿಸಿದ್ದೀರಲ್ಲ. ಅದೇನಾಗಿದೆ ಹೇಳ್ರೆ.

ನಳಿನಿ : ನೀನು ಪುಣ್ಯವಂತೆ ಕಣೆ. ಇಲ್ಲಿದ್ದು ಅದನ್ನೆಲ್ಲಾ ನೋಡಿ ಸಂಕಟ ಪಡುವುದಕ್ಕಿಂತ

ದೂರವಿದ್ದುದು ಒಳ್ಳೇದೆ ಆಯ್ತು.

ಸುಮ : ಅಂತಹ ಸಂಗತಿ ಏನು ನಡೀತು?

ಭಾಮ : ಕಾಶಿರಾಜಪುತ್ರಿಯರನ್ನು ಭೀಷ್ಮರು ಸ್ವಯಂವರ ಮಂಟಪದಿಂದ ಅಪಹರಿಸಿ ತಂದಿದ್ದು ನಿನಗೆ ಗೊತ್ತಿಲ್ಲವೆ?

ಸುಮ : ಗೊತ್ತು.

ಭಾಮ : ಅನಂತರ ರಾಜಮಾತೆಯವರು ಅವರನ್ನು ತಮ್ಮ ಸೊಸೆಯರಾಗಿರೆಂದು ಕೇಳಿಕೊಂಡರು.

ಸುಮ : ಅಂತಹ ಚೆಲುವೆಯರನ್ನು ಯಾರಿಗೆ ತಾನೇ ಸೊಸೆಯರನ್ನಾಗಿ ಪಡೆಯಲು ಇಷ್ಟವಿರುವುದಿಲ್ಲ! ...ಆಮೇಲೆ.

ಭಾಮ : ರಾಜಮಾತೆಯವರ ಮಾತಿಗೆ ಅವರಲ್ಲಿ ಒಬ್ಬರಾದರೂ ತುಟಿ ಪಿಟಿಕ್ ಅನ್ನಲಿಲ್ಲ.

ಸುಮ : ಏನು ಮಾಡುತ್ತಿದ್ದರು?

ಭಾಮ : ದಿನವಿಡೀ ಅಳುತ್ತಿದ್ದರೇ ಹೊರತು, ಯಾವೊಂದು ಮಾತನ್ನೂ ಆಡಲಿಲ್ಲ. ರಾಜಮಾತೆಯವರು ಬಹು ಪ್ರೀತಿಯಿಂದ ಸಂತೈಸುತ್ತಾ “ನಿಮಗೆ ನಮ್ಮ ಪುತ್ರನ ಕೈ ಹಿಡಿಯುವ ಮನಸ್ಸಿಲ್ಲದಿದ್ದರೆ ಮದುವೆಯ ಪ್ರಸ್ತಾಪವನ್ನೇ ನಾವು ಕೈ ಬಿಡುತ್ತೇವೆ. ನೀವು ದುಃಖಿಸಬೇಡಿ. ನಿಮ್ಮ ಇಚ್ಛೆಯೇನೆಂಬುದನ್ನು ತಿಳಿಸಿ. ಯಾವ ಬಗೆಯಲ್ಲೂ ಅಳುಕಬೇಡಿ” ಎಂದು ಮತ್ತೆ ಮತ್ತೆ ಕೇಳಿಕೊಂಡರು.

ನಳಿನಿ : ಅಬ್ಬಾ!...ಅಕ್ಕ ತಂಗಿಯರ ಆ ಸಂಕಟ ಎಂಥವರ ಕರುಳನ್ನೂ ಕರಗಿಸುವಂತಿತ್ತು.

ಸುಮ : ಪಾಪ! ಅವರಾಸೆ ಏನೇನಿತ್ತೋ?

ಭಾಮ : ಯಾವ ಉತ್ತರವೂ ಬರದಿದ್ದಾಗ, ರಾಜಮಾತೆಯವರು ಮದುವೆಯ ಪ್ರಸ್ತಾಪವನ್ನೇ ಕೈ ಬಿಡುವುದರಲ್ಲಿದ್ದರು.

ನಳಿನಿ : ಆದರೆ ಭೀಷ್ಮರು ಮದುವೆ ನಡೆಯಲೇಬೇಕೆಂದು ತಾಯಿಗೆ ಒತ್ತಾಯ ಮಾಡಿದರಂತೆ.

ಸುಮ : ತಾವು ಮದುವೆಯಾಗದಿದ್ದರೂ, ಅನ್ಯರಿಗೆ ಮದುವೆ ಮಾಡಿಸುವುದರಲ್ಲಿ ಭೀಷ್ಮರು ಎತ್ತಿದ ಕೈ. ಅನಂತರ ಏನಾಯ್ತು?

ಭಾಮ : ರಾಜಮಾತೆಯವರು ಇನ್ನೇನು ಮಾಡುತ್ತಾರೆ? ಭೀಷ್ಮರ ಮಾತನ್ನು ಮೀರಲಾಗದೆ, ರಾಜಪುತ್ರಿಯರನ್ನು ಸ್ವಲ್ಪ ಒತ್ತಾಯದಿಂದಲೇ ಮತ್ತೆ ಮತ್ತೆ ಕೇಳಿದಾಗ, ಅವರಲ್ಲಿ ಹಿರಿಯವಳು ಮಾತ್ರ ಬಾಯಿ ಬಿಟ್ಟಳು.

ಸುಮ : ಏನೆಂದು?

ಭಾಮ : ತಾನು ಭೀಷ್ಮರನ್ನು ಮದುವೆಯಾಗುತ್ತೇನೆಂದು.

ಸುಮ : ಏನೆಂದೆ?

ಭಾಮ : ಹೂ ಕಣೆ...ಭೀಷ್ಮರನ್ನು ವರಿಸುತ್ತೇನೆಂದಳು.

ಸುಮ : ಅಯ್ಯೋ! ಅವಳಿಗೆ ಗೊತ್ತಿರಲಿಲ್ಲವೇನೆ? ಭೀಷ್ಮರು ಕಟ್ಟಾ ಬ್ರಹ್ಮಚಾರಿಗಳೆಂದು.

ಭಾಮ : ಗೊತ್ತಿತ್ತೋ....ಗೊತ್ತಿಲ್ಲವೋ....ಅಂತೂ ರಾಜಮಾತೆಯವರ ಪ್ರಶ್ನೆಗೆ ಅವಳದೊಂದೇ ಉತ್ತರ.

ಸುಮ : ಭೀಷ್ಮರು ಏನೆಂದರು?

ಭಾಮ : ಅಂತಃಪುರಕ್ಕೆ ಅವರ್‍ಯಾಕೆ ಬರುತ್ತಾರೆ? ರಾಜಮಾತೆಯೊಬ್ಬರೇ ವಿಚಾರಿಸುತ್ತಿದ್ದರು.

ನಳಿನಿ : ಭೀಷ್ಮರ ವ್ರತವನ್ನು ಆಕೆಗೆ ತಿಳಿಸಿ, ಈ ಜನ್ಮದಲ್ಲಿ ಅವರು ಯಾವ ಕಾರಣದಿಂದಲೂ ಯಾವ ಹೆಣ್ಣನ್ನೂ ಕೈ ಹಿಡಿಯುವುದಿಲ್ಲವೆಂದು ಎಷ್ಟೆಷ್ಟೋ ಬಗೆಯಲ್ಲಿ ರಾಜಮಾತೆ ಹೇಳಿದರು.

ಭಾಮ : ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಆಕೆ ಮಾತ್ರ ಭೀಷ್ಮರ ನಾಮಸ್ಮರಣೆಯನ್ನಲ್ಲದೆ ಮತ್ತೇನನ್ನೂ ಆಡಲಿಲ್ಲ.

ಸುಮ : ಇನ್ನು ಉಳಿದವರಿಬ್ಬರು!

ಭಾಮ : ಅತ್ತು ಅತ್ತು ಸೊರಗಿದ್ದ ಅವರಿಗೆ ಆ ಮಾತುಕತೆ ಮತ್ತಷ್ಟು

ದಿಗ್ಭ್ರಮೆಯನ್ನುಂಟುಮಾಡಿತ್ತು.

ನಳಿನಿ : ಅವರಿಬ್ಬರ ಅಭಿಪ್ರಾಯವೇನೆಂದು ತಿಳಿಯಲು ರಾಜಮಾತೆ ಎಷ್ಟೇ ಪ್ರಯತ್ನ ಮಾಡಿದರೂ ಅವರು ಏನೊಂದನ್ನು ಆಡಲಿಲ್ಲ; ವಿರೋಧಿಸಲೂ ಇಲ್ಲ.

ಭಾಮ : ಅಂತಃಪುರದಲ್ಲಿ ನಡೆದದ್ದನ್ನೆಲ್ಲಾ ಭೀಷ್ಮರಿಗೆ ರಾಜಮಾತೆಯವರು ಹೇಳಿದರಂತೆ.

ನಳಿನಿ : ಅದಕ್ಕೆ ಭೀಷ್ಮರು "ಮೌನ ಸಮ್ಮತಿಯ ಲಕ್ಷಣ"ವೆಂದು ಹೇಳಿ, ವಿಚಿತ್ರವೀರ್ಯನೊಡನೆ ಕಿರಿಯರಿಬ್ಬರ ಮದುವೆಯು ಶೀಘ್ರದಲ್ಲಿ ನಡೆಯಲೆಂದು ಆಜ್ಞಾಪಿಸಿದರಂತೆ.

ಭಾಮ : ನಮಗೀಗ ಅವರು ರಾಣಿಯರಾಗಿದ್ದಾರೆ.

ಸುಮ : ಅವರ ಹೆಸರೇನೆ?

ನಳಿನಿ : ಅಂಬಿಕೆ, ಅಂಬಾಲಿಕೆ.

ಸುಮ : ಹಿರಿಯವಳ ಹೆಸರು?

ಭಾಮ : ಅಂಬೆ.

ನಳಿನಿ : ಅವಳೆಷ್ಟು ರೂಪಸಿಯೇ! ತಂಗಿಯರಿಗಿಂತಲೂ ಅಂಬೆಯೇ ಸುಲಕ್ಷಣವಂತೆ. ಅಬ್ಬಾ! ಅಮೃತಶಿಲೆಯಲ್ಲಿ ಕಡೆದಿರುವ ಶಿಲಾಬಾಲಿಕೆಯಂತೆ ಇದ್ದಾಳಲ್ಲವೇನೆ?

ಭಾಮ : ನಾನೇನಾದರೂ ಭೀಷ್ಮರಂತೆ ಗಂಡಾಗಿದ್ದರೆ, ಬ್ರಹ್ಮಚರ್ಯವನ್ನು ಗಾಳಿಗೆ ತೂರಿ, ಅಂಬೆಯ ಕೈ ಹಿಡಿಯುತ್ತಿದ್ದೆ.

(ಎಲ್ಲರೂ ನಗುತ್ತಾರೆ. ಅಷ್ಟರಲ್ಲಿ ರಾಜಮಾತೆ ಸತ್ಯವತಿ ದೇವಿಯವರು ಅಂತಃಪುರಕ್ಕೆ ಹೊಂದಿಕೊಂಡಿದ್ದ ದೇವಾಲಯಕ್ಕೆ ಹೋಗಲು ತಮ್ಮ ಇಬ್ಬರು ಸೊಸೆಯಂದಿರ ಜೊತೆಗೂಡಿ ಇತ್ತ ಬರುತ್ತಿದ್ದಾರೆ. ಅವರನ್ನು ಕಂಡಕೂಡಲೇ ಸಖಿಯರೆಲ್ಲರೂ ಬೇಗ ಬೇಗನೆ ಚದುರಿ ಉದ್ಯಾನವನದಲ್ಲಿ ಹೂಗಳನ್ನು ಬಿಡಿಸುವುದರಲ್ಲಿ ಮಗ್ನರಾಗುತ್ತಾರೆ.)

ಅಂಕ-2

ದೃಶ್ಯ - 1

[ಅಂತಃಪುರದ ಕೊಠಡಿಯೊಂದರಲ್ಲಿ ಅಂಬೆ ಮತ್ತು ಮಾಲಿನಿ ದೀರ್ಘವಾದ ಆಲೋಚನೆಯಲ್ಲಿ ತಲ್ಲೀನರಾಗಿದ್ದಾರೆ]

ಮಾಲಿನಿ : ದೇವಿ, ಆಗಿಹೋದ ದುರಂತ ಘಟನೆಗಳ ನೆನಪಿನಿಂದ ಯಾವ ಪ್ರಯೋಜನವೂ ಇಲ್ಲ. ಭೀತಿ ಹೆಚ್ಚಾದಷ್ಟೂ ಬಾಳೇ ಹದಗೆಡುತ್ತದೆ.

ಅಂಬೆ : ಭೀತಿಗೆ ಸಿಲುಕಿ ಪರಿತಪಿಸುವಂಥ ದುರ್ಬಲ ಚಿತ್ತ ನನ್ನದಲ್ಲ, ಮಾಲಿನಿ. ಮುಂದೇನು ಮಾಡಬೇಕೆಂಬುದನ್ನು ಯೋಚಿಸುತ್ತಿದ್ದೇನೆ.

ಮಾಲಿನಿ : ತಂದೆಯವರ ಬಳಿಗೆ ಹಿಂತಿರುಗೋಣವೇ?

ಅಂಬೆ : ನನ್ನ ತಂಗಿಯರ ಕಥೆ ಹಾಗಾಯಿತು; ನನ್ನದು ಹೀಗಾಯಿತೆಂದು ಬಾಯ್ಬಿಡುತ್ತಾ ಅನಾಥಳಂತೆ ಅಲ್ಲಿಗೆ ಹೋಗಲೇನು? ಬೆಂದ ಹುಣ್ಣಿನ ಮೇಲೆ ಮತ್ತಷ್ಟು ಬರೆ ಎಳೆಯಲೇ?

ಮಾಲಿನಿ : ಕ್ಷಮಿಸಿ ದೇವಿ. ನಿಮ್ಮ ಹೃದಯಕ್ಕೆ ನೋವಾಗುವಂಥ ಸಲಹೆಯನ್ನು ನೀಡಿದ್ದಕ್ಕಾಗಿ.

ಅಂಬೆ : (ವಿಷಾದಪೂರ್ಣಳಾಗಿ ನಕ್ಕು)
ನೋವು! ಎಂಥಾ ನೋವೆ? ಹೆಣವನ್ನು ಕತ್ತಿಯಿಂದ ಚುಚ್ಚಿದರೆ ನೊಂದನೆಂದು ಒದ್ದಾಡುವುದೇ, ಮಾಲಿನಿ, ಮದುಮಂಟಪದಿಂದ ನಾವು ಅಪಹರಿಸಲ್ಪಟಾಗಲೇ ನಮ್ಮ ಬಾಳಿನ ಮಂಗಳ ಆಖ್ಯಾನ ಮುಗಿಯಿತು.

ಮಾಲಿನಿ : ಇಷ್ಟೊಂದು ನಿರಾಶರಾಗಬೇಡಿ ದೇವಿ. ಬರುವ ಸಂಕಷ್ಟಗಳನ್ನು ಎದುರಿಸಿ ಬಾಳುವುದೇ ನಮ್ಮ ಗುರಿಯಲ್ಲವೇ?

ಅಂಬೆ : ಈಗ ನನ್ನ ಬಾಳಿಗಿರುವುದು ಒಂದೇ ಒಂದು ಗುರಿ ಮಾತ್ರ.

ಮಾಲಿನಿ : ಅದೇನೆಂಬುದನ್ನು ತಿಳಿಯಬಹುದೆ ದೇವಿ.

ಅಂಬೆ : ನಿನಗಲ್ಲದೆ ಮತ್ತಾರಿಗೆ ನಾನದನ್ನು ತಿಳಿಸಲಿ.
(ಕ್ಷಣಕಾಲ ಸುಮ್ಮನಿದ್ದು)

ಮಾಲಿನಿ, ಮುಳ್ಳನ್ನು ಮುಳ್ಳಿನಿಂದಲೇ ಕೀಳೋಣವೆಂದು ನಿರ್ಧರಿಸಿದ್ದೇನೆ.

ಮಾಲಿನಿ : (ಅಂಬೆಯ ಮಾತಿನ ಅಂತರಾರ್ಥವನ್ನು ತಿಳಿಯದೆ ಸುಮ್ಮನೆ ನೋಡುತ್ತಾಳೆ)

ಅಂಬೆ : ಸ್ವಯಂವರ ಮಂಟಪವನ್ನು ಮಣ್ಣುಗೂಡಿಸಿ, ನಮ್ಮನ್ನು ಇಲ್ಲಿಗೆ ಎಳೆತಂದವನು ಯಾರು ಮಾಲಿನಿ?

ಮಾಲಿನಿ : (ಅಚ್ಚರಿಯಿಂದ)
ಇದೇನು ದೇವಿ ಹೀಗೆ ಕೇಳುತ್ತಿದ್ದೀರಿ?

ಅಂಬೆ : ಸುಮ್ಮನೆ ನನ್ನ ಮಾತಿಗೆ ಉತ್ತರ ನೀಡು.

ಮಾಲಿನಿ : (ಅಂಬೆಯ ಆವೇಶಪೂರ್ಣವಾದ ದೃಷ್ಟಿಯನ್ನು ಕಂಡು ಸ್ವಲ್ಪ ಭೀತಿಗಳೊಗಾಗಿ...)
ಭೀಷ್ಮ.

ಅಂಬೆ : ನನ್ನ ಬಾಳಿನ ಆಶಾಲತೆ ಚಿಗುರುತ್ತಿದ್ದ ಕಾಲದಲ್ಲೇ ಅದನ್ನು ಚಿಗುಟಿ ಹಾಕಿದವನಾರು?

ಮಾಲಿನಿ : ಭೀಷ್ಮ.

ಅಂಬೆ : ಹೆತ್ತ ಕರುಳಿಗೆ ಕಿಚ್ಚಿಟ್ಟವನಾರು?

ಮಾಲಿನಿ : (ಮೌನ)

ಅಂಬೆ : ಒಲಿದ ಹೃದಯಗಳನ್ನು ಶಾಶ್ವತವಾಗಿ ಅಗಲಿಕೆಗೆ ಗುರಿಮಾಡಿದವನಾರು?

ಮಾಲಿನಿ : (ಮೌನ)

ಅಂಬೆ : ಮುಗ್ಧೆಯರಾದ ನನ್ನ ಸೋದರಿಯರ ಮನದ ಆಶೆಯನ್ನು ನಾಶ ಮಾಡಿ, ಒತ್ತಾಯಕ್ಕೆ ಮಣಿದು ಬಾಳುವಂತೆ ಮಾಡಿದವನಾರು?

ಮಾಲಿನಿ : (ಮೌನ)

ಅಂಬೆ : (ಆವೇಶದ ತೀವ್ರತೆಯಿಂದ ಕಂಠದ ಧ್ವನಿಯು ಹೆಚ್ಚಾಗುತ್ತದೆ....)
ಮಾತಾಡು ಮಾಲಿನಿ. ನಿನ್ನ ಧ್ವನಿ ಅಡಗಿಹೋಯಿತೇ? ಹೇಳು, ನಮ್ಮ ವಂಶದ ಕೀರ್ತಿಗೆ ಕಳಂಕದ ಕಪ್ಪನ್ನು ಹಚ್ಚಿದವನಾರು?.... ಹೇಳು ಮಾಲಿನಿ?

ಮಾಲಿನಿ : (ಅಂಬೆಯ ಮನೋವೇದನೆಯನ್ನು ಅರಿತ ಮಾಲಿನಿಗೆ ಹೃದಯ ಹಿಂಡಿದಂತಾಗುತ್ತದೆ. ಕಂಬನಿಗಳು ತುಂಬಿ ಬರುತ್ತವೆ.)
ದೇವಿ, ದೇವಿ, ಶಾಂತರಾಗಿ ದೇವಿ. ಶಾಂತರಾಗಿ, ಆವೇಶಗೊಳ್ಳಬೇಡಿ..
(ಎಂದು ಹೇಳುತ್ತಿದ್ದಂತೆಯೇ ಮಾಲಿನಿಯ ಧ್ವನಿ ಗದ್ಗದಗೊಳ್ಳುತ್ತದೆ.)

ಅಂಬೆ : ಇನ್ನೆಲ್ಲಿಯ ಶಾಂತಿ ಮಾಲಿನಿ. ಒಡೆದ ಹಾಲಿನಂತಾಗಿರುವ ನನ್ನ ಬಾಳಿಗೆ ಸಾವು ಬಂದಾಗಲೇ ಶಾಂತಿ.
(ಎಂದು ಹೇಳುತ್ತಿದ್ದಂತೆ ಕಣ್ಣುಗಳಲ್ಲಿ ಧಾರಾಕಾರವಾಗಿ ಬಿಸಿಗಂಬನಿಗಳು ಹರಿಯಲಾರಂಭಿಸುತ್ತವೆ. ತನ್ನೊಡತಿಯ ಸಂಕಟವನ್ನು ಕಂಡು ಮಾಲಿನಿ, ಅಂಬೆಯ ಕೈಗಳನ್ನು ಹಿಡಿದುಕೊಂಡು ಸಮಾಧಾನ ಮಾಡಲೆತ್ನಿಸುತ್ತ ತಾನೂ ಅಳತೊಡಗುತ್ತಾಳೆ. ಸ್ವಲ್ಪ ಸಮಯ ಇಬ್ಬರೂ ಮೌನದಿಂದಿರುತ್ತಾರೆ.)

ಅಂಬೆ : (ನಿರ್ಧಾರದ ಧ್ವನಿಯಿಂದ)
ಈಗೊಂದು ಕಾರ್ಯವನ್ನು ಮಾಡಬೇಕಾಗಿದೆ.

ಮಾಲಿನಿ : ಯಾವುದು ದೇವಿ?

ಅಂಬೆ : ಶಂತನುವಿನ ಹಿರಿಯ ಮಗನ ಕೈ ಹಿಡಿಯಲೇಬೇಕು.

ಮಾಲಿನಿ : ಬಹುವಾಗಿ ದ್ವೇಷಿಸುವ ವ್ಯಕ್ತಿಯೊಡನೆ ಕೂಡಿ ಬಾಳುತ್ತೀರ!

ಅಂಬೆ : ಬಾಳುವುದಕ್ಕಲ್ಲ ಮಾಲಿನಿ.

ಮಾಲಿನಿ : ಅಂದರೆ!

ಅಂಬೆ : ನಮ್ಮ ಬಾಳು ಹಾಳಾಗಿರುವಂತೆ, ಅವನ ಬಾಳನ್ನು ನಾಶಮಾಡುವುದಕ್ಕಾಗಿ.

ಮಾಲಿನಿ : ತಮ್ಮ ಅಂತರಂಗವೇನೆಂಬುದೇ ಅರ್ಥವಾಗುತ್ತಿಲ್ಲ.

ಅಂಬೆ : (ಕ್ರೋಧಭರಿತಳಾಗಿ)
ಹೆಣ್ಣಿನ ಗೊಡವೆಯೇ ಬೇಡವೆಂದು ದೂರ ಸರಿದಿರುವ ಆತನ ಬಾಳಿನಲ್ಲಿ ನಾನು ಸ್ಥಾನವನ್ನು ಪಡೆಯಲೇಬೇಕು. ಅವನ ಪ್ರತಿಜ್ಞೆಗೆ ಭಂಗ ತರಲೇಬೇಕು. ಅಚ್ಚಳಿಯದ ಕೀರ್ತಿಯಿಂದ ಆತ ಚ್ಯುತಿಗೊಳ್ಳುವಂತೆ ಮಾಡಲೇಬೇಕು. ಅಂದೇ ನನಗೆ ನೆಮ್ಮದಿ.

ನಮ್ಮ ಬಾಳನ್ನು ದಹಿಸಿದ ಅಪಮಾನದ ಉರಿ ಆತನ ಬಾಳನ್ನೂ ಬೇಯಿಸಬೇಕು. ಲೋಕದ ಪರಿಹಾಸ್ಯಕ್ಕೆ ಆತ ಗುರಿಯಾಗುವಂತೆ ಮಾಡಲೇಬೇಕು.

ಮಾಲಿನಿ : ಇದು ಸಾಧ್ಯವೇ ದೇವಿ?

ಅಂಬೆ : ಮನುಷ್ಯ ಪ್ರಯತ್ನದ ಮುಂದೆ ಲೋಕದಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ.

ಮಾಲಿನಿ : ದೇವಿ, ನಿಮ್ಮ ನಿರ್ಧಾರವನ್ನು ಕಾರ್ಯರೂಪಕ್ಕೆ ತರುವ ಹಾದಿ ಯಾವುದು?

ಅಂಬೆ : ನೇರವಾದದ್ದು.

ಮಾಲಿನಿ : ಅಂದರೆ!

ಅಂಬೆ : ನನ್ನ ಪರವಾಗಿ ನೀನು ಆತನಲ್ಲಿಗೆ ಹೋಗಿ, ಅವನ ಕೈ ಹಿಡಿಯಬೇಕೆಂಬ ನನ್ನ ಇಚ್ಛೆಯನ್ನು ಮತ್ತಷ್ಟು ಪ್ರಬಲವಾಗಿ ತಿಳಿಸು.

ಮಾಲಿನಿ : ಪ್ರತಿಜ್ಞಾಬದ್ಧನಾದ ಆತ ತನ್ನ ನಿಲುವನ್ನೇ ಸಮರ್ಥಿಸಿಕೊಂಡರೇ?

ಅಂಬೆ : ನಿನ್ನ ಬುದ್ಧಿಶಕ್ತಿಯೆನ್ನೆಲ್ಲಾ ಬಳಸಿ ಅವನ ಮನಸ್ಸನ್ನು ಬದಲಿಸಲು ಯತ್ನಿಸು.

ಮಾಲಿನಿ : ನನ್ನ ಕೈಲಾದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆ. ಶುಭವಾಗಲೆಂದು ಹಾರೈಸಿ ದೇವಿ.

ಅಂಬೆ : ಯಾರಿಗೆ ಶುಭವಾಗಲೆಂದು ಹಾರೈಸಲೇ? ಮಾಲಿನಿ.

ಮಾಲಿನಿ : ದೇವಿ.....

ಅಂಬೆ : ಶುಭ ಅಶುಭದ ಪ್ರಶ್ನೆ ಮುಗಿದಿವೆ ಮಾಲಿನಿ. ಈಗುಳಿದಿರುವುದು ಅಪಮಾನದ ಅಗ್ನಿ ಮಾತ್ರ. ಅದು ನಂದುವ ಮುನ್ನ ಹಗೆಯ ಬಾಳಿಗೆ ಹಚ್ಚಬೇಕಾಗಿದೆ.

ಮಾಲಿನಿ : ನಾನಿನ್ನು ಹೋಗಿ ಬರುತ್ತೇನೆ.
(ಅಲ್ಲಿಂದ ತೆರಳುತ್ತಾಳೆ.)

ದೃಶ್ಯ-2

[ಅರಮನೆಯಲ್ಲಿನ ಒಂದು ಕೊಠಡಿ. ಪೀಠವೊಂದರಲ್ಲಿ ಭೀಷ್ಮರು ಯೋಚನಾಮಗ್ನರಾಗಿ ಒರಗಿದ್ದಾರೆ. ಮಾಲಿನಿ ಅಲ್ಲಿಗೆ ಆಗಮಿಸುತ್ತಾಳೆ]

ಮಾಲಿನಿ : ಪೂಜ್ಯರಿಗೆ ವಂದಿಸುತ್ತೇನೆ.

ಭೀಷ್ಮ : ಕುಳಿತಿಕೊ ಮಾಲಿನಿ.

ಮಾಲಿನಿ : ತಮ್ಮನ್ನೇ ಕಾಣಲೆಂದು ಬಂದೆ.

ಭೀಷ್ಮ : ಉದ್ದೇಶವೇನು?

ಮಾಲಿನಿ : ತಮ್ಮ ನೆರವಿನಿಂದ ಆಗಬೇಕಾದ ಕಾರ್ಯವೊಂದಿದೆ.

ಭೀಷ್ಮ : ಯಾವುದದು?

ಮಾಲಿನಿ : ಬೇರು ಸಹಿತ ಕಿತ್ತು ತಂದಿರುವ ಸಸಿಯನ್ನು ಮತ್ತೆ ನೆಟ್ಟು ನೀರೆರೆದು ಪೋಷಿಸಬೇಕಾಗಿದೆ.

ಭೀಷ್ಮ : (ಹುಬ್ಬುಗಂಟಿಕ್ಕಿ)
ಒಗಟಿನ ಮಾತುಗಳನ್ನಾಡಿ ಸಮಯ ವ್ಯರ್ಥ ಮಾಡಬೇಡ.

ಮಾಲಿನಿ : (ಕೆಲವು ಕ್ಷಣ ಸುಮ್ಮನಿದ್ದು)
ಕಾಶೀರಾಜನ ಪುತ್ರಿಯಾದ ಅಂಬೆಯ ಪ್ರತಿನಿಧಿಯಾಗಿ ನಾನು ನಿಮ್ಮಲ್ಲಿಗೆ ಬಂದಿದ್ದೇನೆ.

ಭೀಷ್ಮ : ಯಾವ ಕಾರಣಕ್ಕಾಗಿ?

ಮಾಲಿನಿ : ಆಕೆಯ ಅಂತರಂಗದ ಆಸೆಗಳನ್ನು ತಮಗೆ ತಿಳಿಸಲೆಂದು.

ಭೀಷ್ಮ : ರಾಜಮಾತೆಯವರ ಮುಂದೆ ಹೇಳಿಕೊಂಡಿದ್ದ ವಿಷಯವೇನು?

ಮಾಲಿನಿ : ಹೌದು, ಆಕೆ ತಮಗೆ ಮನಸೋತಿದ್ದಾಳೆ.

ಭೀಷ್ಮ : ಈ ಜನ್ಮದಲ್ಲಿ ಯಾವುದೇ ಹೆಣ್ಣಿಗೂ ನನ್ನ ಹೃದಯದಲ್ಲಿ ಸ್ಥಾನವಿಲ್ಲವೆಂಬ ನಿರ್ಧಾರ ಆಕೆಗೆ ತಿಳಿಯದೇನು?

ಮಾಲಿನಿ : ತಿಳಿದಿದೆ ಪೂಜ್ಯರೆ. ಆದರೆ ಸಾಗರದ ಅಲೆಗಳಂತೆ ಏರಿಳಿತಕ್ಕೆ ಒಳಗಾಗುತ್ತಿರುವ ಯಾವುದೋ ಒಂದು ನಿರ್ಧಾರವನ್ನೇ ಅಚಲವೆಂದು ಭಾವಿಸಬೇಕೆ?

ಭೀಷ್ಮ : ನಿನ್ನ ಮಾತಿನ ವ್ಯಾಖ್ಯಾನ ಅನ್ಯರ ಪಾಲಿಗಿರಲಿ. ನನ್ನ ನಿರ್ಧಾರ ಎಂದೆಂದಿಗೂ ಅಸ್ಥಿರವಾಗದು.

ಮಾಲಿನಿ : ನಾನು ತಮ್ಮ ನಿರ್ಧಾರದ ಅಳಿವು ಉಳಿವುಗಳ ಬಗೆಗೆ ಪ್ರಸ್ತಾಪಿಸುತ್ತಿಲ್ಲ ಪೂಜ್ಯರೆ. ಆದರೆ ಮಾನವ ಸಹಜವಾದ ಅನುಕಂಪೆಯ ದೃಷ್ಟಿಯಿಂದ ಒಂದು ಹೆಣ್ಣಿನ ಭವಿಷ್ಯವನ್ನು ಉತ್ತಮಪಡಿಸಿರೆಂದು ಬೇಡಿಕೊಳ್ಳುತ್ತಿದ್ದೇನೆ.

ಭೀಷ್ಮ : ಅನ್ಯರ ಭವಿಷ್ಯವನ್ನು ಉತ್ತಮಪಡಿಸಲು ನನ್ನ ವ್ಯಕ್ತಿತ್ವದ ಇತಿಮಿತಿಯಲ್ಲಿ ಪ್ರಯತ್ನಿಸಬಹುದೇ ವಿನಹ, ಅದನ್ನು ಮೀರಿ ಸಾಧ್ಯವಿಲ್ಲ.

ಮಾಲಿನಿ : ಹಾಗೆಯೇ ಆಗಲಿ ಪೂಜ್ಯರೆ. ಅಪ್ಸರೆಯಂತೆ ಮಹಾ ರೂಪವತಿಯೂ, ಅನಸೂಯೆಯಂತೆ ಸುಗುಣವತಿಯೂ ಆಗಿರುವ ಅಂಬೆಯನ್ನು ತಮ್ಮ ಬಾಳಸಂಗಾತಿಯನ್ನಾಗಿ ಮಾಡಿಕೊಳ್ಳುವುದರಿಂದ ಯಾವ ದೋಷವೂ ಇಲ್ಲ. ಮುರಿದು ಬೀಳುತ್ತಿರುವ ಒಂದು ಹೆಣ್ಣಿನ ಬಾಳನ್ನು ತಮ್ಮ ಔದಾರ್ಯದ ಊರೆಗೋಲಿನಿಂದ ನಿಲ್ಲಿಸಿದ ಕೀರ್ತಿ ತಮಗೆ ಸಲ್ಲುತ್ತದೆ.

ಭೀಷ್ಮ : ಮಾಲಿನಿ, ಹಾಗೆ ಮಾಡಿದರೆ ಅದು ನನ್ನ ಔದಾರ್ಯವಾಗುತ್ತದೆಯೋ ಅಥವಾ ಹೆಣ್ಣಿಗಾಗಿ ಅಂತರಂಗದಲ್ಲಿ ಆಸೆಪಟ್ಟು ನನಗೆ ನಾನೇ ಮಾಡಿಕೊಂಡ ಆತ್ಮವಂಚನೆಯಾಗುತ್ತದೆಯೋ?

ಮಾಲಿನಿ : ಇಲ್ಲಿ ವಂಚನೆಯ ಪ್ರಶ್ನೆಯೇ ಬಾರದು ಪೂಜ್ಯರೆ. ನೊಂದು ಬೆಂದಿರುವ ಒಂದು ಹೆಣ್ಣಿನ ಬಾಳಿಗೆ ನೆಮ್ಮದಿಯನ್ನು ನೀಡಿ, ಅವಳ ಬಾಳಿಗೆ ಜೀವ ತುಂಬಿದ ಪುಣ್ಯ ತಮ್ಮದಾಗುವುದಿಲ್ಲವೇ?

ಭೀಷ್ಮ : ಖಂಡಿತ ಸಾಧ್ಯವಿಲ್ಲ. ಒಂದು ಹೆಣ್ಣಿನ ಬಾಳನ್ನು ಸರಿಪಡಿಸುವುದಕ್ಕಾಗಿ ನನ್ನ ನಿರ್ಧಾರವನ್ನು ಕೈ ಬಿಡಲಾರೆ.

ಮಾಲಿನಿ : ತಮ್ಮ ನಿರ್ಧಾರವನ್ನು ಬದಲಿಸಲು ಸಾಧ್ಯವಿಲ್ಲವೇ?

ಭೀಷ್ಮ : ಇಲ್ಲ ಮಾಲಿನಿ ಅದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಆಗ ನನ್ನ ಬಾಳಿಗೆ ಯಾವ ಗುರಿಯೂ ಇರುವುದಿಲ್ಲ; ಯಾವ ಬೆಲೆಯೂ ಇಲ್ಲದಾಗುತ್ತದೆ.

ಮಾಲಿನಿ : ನಿಮ್ಮ ವೈಯಕ್ತಿಕ ಜೀವನದ ಆಗು ಹೋಗುಗಳ ಬಗೆಗೆ ಇಷ್ಟೊಂದು ಕಳಕಳಿಯಿರುವಂತೆ, ಜಗತ್ತಿನಲ್ಲಿ ಮತ್ತಾರಿಗೂ ಇಲ್ಲವೆಂದು ಭಾವಿಸಿದ್ದೀರಾ?

ಭೀಷ್ಮ : ಪರರ ಬಾಳನ್ನು ನಾನು ಹಾಗೆಂದೂ ಉಪೇಕ್ಷೆ ಮಾಡಿಲ್ಲ. ನನ್ನದನ್ನು ದೊಡ್ಡದೆಂದು ಭಾವಿಸಿಲ್ಲ.

ಮಾಲಿನಿ : ಹಾಗಾದರೆ ಅಂಬೆಯ ಬಾಳಿನಲ್ಲೇಕೆ ನೀವು ಪ್ರವೇಶಿಸಿದಿರಿ? ಅವಳ ಭವಿಷ್ಯದ ಸೌಧವನ್ನೇಕೆ ನಿಮ್ಮ ಬಾಹುಬಲದಿಂದ ಮುರಿದಿರಿ? ನಿಮಗಿರುವಂತೆಯೇ ಅವಳಿಗೂ ಜೀವನದಲ್ಲಿ ಒಂದು ಆಶೆ ಆದರ್ಶಗಳಿರಲಿಲ್ಲವೇನು? ಅವುಗಳನ್ನೆಲ್ಲಾ ಒಂದೇ ಕ್ಷಣದಲ್ಲಿ ಧ್ವಂಸಗೈದು ಬಂದಿರಲ್ಲ? ಅದು ಸರಿಯೇ?

ಭೀಷ್ಮ : ಅದರಲ್ಲಿ ರಾಜಕಾರಣದ ಉದ್ದೇಶವಿತ್ತು

ಮಾಲಿನಿ : ರಾಜಕಾರಣದಲ್ಲಿ ಮಾನವೀಯತೆಗೆ ಅವಕಾಶವಿಲ್ಲವೇನು?

ಭೀಷ್ಮ : (ಸ್ವಲ್ಪ ಕೋಪದಿಂದ)

ಮಾಲಿನಿ.

ಮಾಲಿನಿ : ದಯವಿಟ್ಟು ಕೋಪಗೊಳ್ಳಬೇಡಿ ಪೂಜ್ಯರೆ. ನಾನು ನಿಮ್ಮನ್ನು ಪರಿಹಾಸ್ಯ ಮಾಡುವುದಕ್ಕಾಗಲಿ ಅಥವಾ ನಿಮ್ಮ ಕೃತ್ಯದ ಬಗೆಗೆ ಕೆಣಕಿ ಕ್ರೋಧಗೊಳಿಸುವುದಕ್ಕಾಗಿ ತಮ್ಮ ಬಳಿಗೆ ಬಂದಿಲ್ಲ. ಹೆಣ್ಣೊಬ್ಬಳ ಒಡೆದಿರುವ ಬಾಳನ್ನು ಸರಿಪಡಿಸಿರೆಂದು ಕೇಳಿಕೊಳ್ಳಲು ಬಂದಿದ್ದೇನೆ. ನಮ್ಮ ರಾಣಿಯ ಹೃದಯದ ನೋವು ಎಂತಹುದೆಂಬುದನ್ನು ನೀವು ಅರ್ಥ ಮಾಡಿಕೊಳ್ಳಿ.

ಭೀಷ್ಮ : ಎಲ್ಲರ ನೋವನ್ನೂ ಅರ್ಥಮಾಡಿಕೊಂಡು, ಸರಿಪಡಿಸಲು ನನ್ನ ಕೈಯಲ್ಲಿ ಸಾಧ್ಯವೇ?

ಮಾಲಿನಿ : ವಿನಾಕಾರಣವಾಗಿ ಅನ್ಯರಿಗೆ ನೋವನ್ನುಂಟುಮಾಡಲು ಸಾಧ್ಯವಿದೆಯಲ್ಲವೇ?.... ಮುಗ್ಧೆಯರ ಬಾಳನ್ನು ನಿಷ್ಕರುಣೆಯಿಂದ ಹಾಳು ಮಾಡುವುದು ನಿಮ್ಮಂತಹ ಲೋಕಜ್ಞಾನವುಳ್ಳ ಮಹಿಮರಿಗೆ ಶೋಭಿಸುವುದೇ?

(ಆವೇಶದ ತೀವ್ರತೆಯಿಂದ)

ತಮ್ಮಲ್ಲಿ ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ ಪ್ರಭು, ಈ ಸಮಯದಲ್ಲಿ ಹಠಕ್ಕಿಂತ ಕರುಣೆ ಮುಖ್ಯ; ಪ್ರತಿಜ್ಞೆಗಿಂತ ವಿವೇಚನೆ ಮುಖ್ಯ.

ಭೀಷ್ಮ : (ಮಾಲಿನಿಯ ವೇದನೆಯ ತೀವ್ರತೆಯನ್ನು ಗಮನಿಸಿದ ಭೀಷ್ಮರು ಕೆಲ ಕ್ಷಣ ಸುಮ್ಮನಿದ್ದು, ಅನಂತರ ನಿಧಾನವಾಗಿ)

ಮಾಲಿನಿ, ಈಗ ನಿನಗೆ ಮುಖ್ಯವಾಗಿರುವುದು ಅಂಬೆಯ ಬಾಳನ್ನು ಸುಖಮಯವಾಗಿಸುವುದಲ್ಲವೇ?

ಮಾಲಿನಿ : ಹೌದು ಪ್ರಭು.

ಭೀಷ್ಮ : ಆ ಹೊಣೆಯನ್ನು ನನಗೆ ಬಿಡು. ಆಕೆಯ ಬಾಳಿಗೆ ಮಂಗಳದ ಮಾರ್ಗವನ್ನು ನಾನು ತೋರಿಸುತ್ತೇನೆ.

ಮಾಲಿನಿ : (ಅಚ್ಚರಿಯಿಂದ)
ಯಾವ ರೀತಿ ಪೂಜ್ಯರೇ?

ಭೀಷ್ಮ : ಅಂಬೆಯು ಯಾರ ಬಾಳ ಸಂಗಾತಿಯಾಗಬೇಕೆಂದು ಹಂಬಲಿಸಿದ್ದಳೋ, ಆ ರಾಜನೊಡನೆ ಆಕೆಯ ವಿವಾಹವನ್ನು ಗೊತ್ತುಪಡಿಸುತ್ತೇನೆ.

ಮಾಲಿನಿ : (ಹುಬ್ಬು ಗಂಟಿಕ್ಕಿ)
ಯಾರೊಡನೆ ಪ್ರಭು?

ಭೀಷ್ಮ : ಸಾಲ್ವಲನೊಡನೆ.

ಮಾಲಿನಿ : ತಾವು ಅಪಹರಿಸಿ ತಂದಿರುವ ವಧುವನ್ನು ಆತ ಕೈ ಹಿಡಿಯಲು ಒಪ್ಪÀಿತ್ತಾನೆಯೇ?

ಭೀಷ್ಮ : ಒಪ್ಪಿಸುವ ಭಾರ ನನ್ನದು.

ಮಾಲಿನಿ : ಒಡೆದ ಮಡಕೆಯ ಚೂರುಗಳನ್ನು ಮತ್ತೆ ಒಂದುಗೂಡಿಸುವಿರ!

ಭೀಷ್ಮ : (ಸ್ವಲ್ಪ ಅಸಹನೆಯಿಂದ)
ಮಾಲಿನಿ,

ಮಾಲಿನಿ : ಮದುಮಂಟಪದಲ್ಲಿ ಸಾಲ್ವಲನನ್ನು ಸದೆಬಡಿದು, ಆತನ ಕಣ್ಣ ಮುಂದೆಯೇ ಆಕೆಯನ್ನು ನೀವು ಎಳೆತಂದಿರುವಾಗ, ಈ ಸಂಬಂಧಕ್ಕೆ ಆತ ಒಪ್ಪÂತ್ತಾನೆಯೇ?.... ಆತನಿಗೂ ಆತ್ಮಗೌರವವಿರುವುದಿಲ್ಲವೇನು? ಒಂದು ವೇಳೆ ಆತ ಒಪ್ಪಿದರೂ ನಮ್ಮ ಒಡತಿ ಇದಕ್ಕೆ ಖಂಡಿತ ಸಮ್ಮತಿಸುವುದಿಲ್ಲ.

ಭೀಷ್ಮ : ಕಾರಣ?

ಮಾಲಿನಿ : ಯಾವ ಕ್ಷಣದಲ್ಲಿ ಆಕೆ ನಿಮ್ಮಿಂದ ಅಪಹರಿಸಲ್ಪಟ್ಟಳೋ, ಆ ಕ್ಷಣದಿಂದಲೇ ಆಕೆ ನಿಮ್ಮವಳು. ಅವಳನ್ನು ಪಡೆಯುವ ಹಕ್ಕು ನಿಮಗಿದೆಯೇ ಹೊರತು, ಅನ್ಯರಿಗಲ್ಲ.

ಭೀಷ್ಮ : ನಾನು ಒಪ್ಪದಿರುವಾಗ?

ಮಾಲಿನಿ : ನಿಮ್ಮನ್ನೇ ಪಡೆಯುವುದಕ್ಕಾಗಿ ಆಕೆ ಪ್ರಯತ್ನಿಸುತ್ತಾಳೆ. ನೀವೇ ಅವಳಿಗೆ ಸರ್ವಸ್ವ. ಅವಳ ಹೃದಯದಲ್ಲಿ ಈಗ ನೆಲೆಸಿರುವವರು ನೀವೊಬ್ಬರೆ. ಅಲ್ಲಿ ಮತ್ತೊಬ್ಬರಿಗೆ ಈ ಜನ್ಮದಲ್ಲಿ ಸ್ಥಾನವೇ ಇಲ್ಲ.

ಭೀಷ್ಮ : ಮಾಲಿನಿ, ನಿನ್ನ ಮಾತನ್ನು ನಿಲ್ಲಿಸು. ನೀನು ಯಾವ ಬಗೆಯ ಸಾಹಸ ಮಾಡಿದರೂ ನನ್ನ ನಿರ್ಧಾರವನ್ನು ಬದಲಿಸಲಾರೆ.

ಮಾಲಿನಿ : ಪೂಜ್ಯರೇ, ಮತ್ತೊಮ್ಮೆ ಕೈ ಜೋಡಿಸಿ ಬೇಡಿಕೊಳ್ಳುತ್ತೇನೆ "ನನ್ನೊಡತಿಯನ್ನು ರಕ್ಷಿಸಿ."

ಭೀಷ್ಮ : ರಕ್ಷಿಸಬಲ್ಲ ಶಕ್ತಿ ನನಗಿಲ್ಲ.

ಮಾಲಿನಿ : ಹಾಗಾದರೆ ನೀವೇ ಕೈಯಾರ ಆಕೆಯನ್ನು ಕೊಂದುಬಿಡಿ.

ಭೀಷ್ಮ : ಮತ್ತೊಂದು ದೋಷವನ್ನು ಕಟ್ಟಿಕೊಳ್ಳಲೇನು?

ಮಾಲಿನಿ : (ಅಚ್ಚರಿಯಿಂದ)

ಈಗ ಮಾಡಿರುವುದು ದೋಷವೆಂಬ ಅರಿವು ತಮಗಿರುವುದೇ?

ಭೀಷ್ಮ : ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?

ಮಾಲಿನಿ : ಹಾಗಾದರೆ ಅಂಬೆಯ ಬಾಳನ್ನು ಉದ್ಧಾರಮಾಡಿ ಪೂಜ್ಯರೆ.

ಭೀಷ್ಮ : (ನಿರ್ಧಾರದ ಧ್ವನಿಯಲ್ಲಿ)

ಅದೊಂದು ಮಾತ್ರ ಸಾಧ್ಯವಿಲ್ಲ ಮಾಲಿನಿ. ಯಾವ ಕ್ಷಣದಲ್ಲಿ “ಈ ಧರೆಯ ಮೇಲಿನ ಹೆಣ್ಣುಗಳೆಲ್ಲರನ್ನೂ ನನ್ನ ತಾಯಂದಿರಿಗೆ ಸಮಾನರೆಂದು” ಭಾವಿಸಿರುವೆನೋ, ಅದು ನನ್ನ ಬಾಳಿನ ಕೊನೆ ಗಳಿಗೆಯ ತನಕ ನನ್ನೊಡನೆ ಇರುತ್ತದೆ. ಅದಕ್ಕೆ ಯಾವ ಕಾರಣದಿಂದಲೂ ನಾನು ಚ್ಯುತಿ ತಂದುಕೊಳ್ಳಲಾರೆ.

ಮಾಲಿನಿ : ಇದೇ ತಮ್ಮ ಅಂತಿಮ ನಿರ್ಧಾರವೇ?

ಭೀಷ್ಮ : ಹೌದು.

ಮಾಲಿನಿ : (ನಿರಾಶಳಾಗಿ)
ನಾನಿನ್ನು ಬರುತ್ತೇನೆ.

(ವಂದಿಸಿ ಹಿಂತಿರುಗುತ್ತಾಳೆ.)

ದೃಶ್ಯ-3

[ಅರಮನೆಯಲ್ಲಿನ ಕೊಠಡಿಯೊಂದರಲ್ಲಿ ಭೀಷ್ಮರು ಕುಳಿತಿದ್ದಾರೆ. ಅಲ್ಲಿಗೆ ಮಾಲಿನಿಯು ಆಗಮಿಸುತ್ತಾಳೆ]

ಮಾಲಿನಿ : ಪೂಜ್ಯರಿಗೆ ವಂದಿಸುತ್ತೇನೆ.

ಭೀಷ್ಮ : [ಮಾಲಿನಿಯನ್ನು ಕಂಡು ಅಚ್ಚರಿಗೊಂಡು]
ಬಾ ಮಾಲಿನಿ, ಇಷ್ಟು ಬೇಗ ಮತ್ತೆ ಬಂದ ಉದ್ದೇಶವೇನು?

ಮಾಲಿನಿ : ದೇವಿಯವರು ತಮ್ಮನ್ನು ಕಾಣಲೆಂದು ಬಂದಿದ್ದಾರೆ.

ಭೀಷ್ಮ : ಯಾರು?

ಮಾಲಿನಿ : ರಾಜಕುಮಾರಿ ಅಂಬೆ ಒಳಕ್ಕೆ ಬರಲು ತಮ್ಮ ಅನುಮತಿಯನ್ನು ಅಪೇಕ್ಷಿಸುತ್ತಿದ್ದಾರೆ.

ಭೀಷ್ಮ : (ಕ್ಷಣಕಾಲ ಯೋಚಿಸಿ, ನಂತರ)
ಬರುವಂತೆ ಹೇಳು.
(ಮಾಲಿನಿ ನಿರ್ಗಮಿಸುತ್ತಾಳೆ. ಅನಂತರ ಅಂಬೆಯು ಮಾಲಿನಿಯೊಡನೆ ಪ್ರವೇಶಿಸುತ್ತಾಳೆ).

ಭೀಷ್ಮ : ಕುಳಿತುಕೊಳ್ಳಿ.
[ಅವರಿಬ್ಬರು ಪೀಠಗಳಲ್ಲಿ ಕುಳಿತ ನಂತರ, ಮಾಲಿನಿಯ ಕಡೆಗೆ ಪ್ರಶ್ನಾರ್ಥಕ ದೃಷ್ಟಿಯಿಂದ ಭೀಷ್ಮರು ನೋಡುತ್ತಾರೆ]

ಮಾಲಿನಿ : ತಮ್ಮ ನಿರ್ಧಾರವನ್ನು ರಾಜಕುಮಾರಿಗೆ ತಿಳಿಸಿದೆನು. ತಮ್ಮೊಡನೆ ಮಾತಾಡಬೇಕೆಂಬ ಉದ್ದೇಶದಿಂದ ಬಂದಿದ್ದಾರೆ.

(ಮಾಲಿನಿಯ ನುಡಿಗಳಿಗೆ ಪ್ರತಿಯಾಗಿ ಏನನ್ನೂ ಆಡದೆ ಭೀಷ್ಮ ಅಂಬೆಯತ್ತ ನೋಡುತ್ತಾನೆ. ಅಂಬೆಯು ಆತನ ಕಡೆಗೆ ದಿಟ್ಟಿಸಿ ನೋಡುತ್ತಾಳೆ. ಕ್ಷಣಕಾಲ ಅವರಿಬ್ಬರ ದೃಷ್ಟಿ ಒಂದುಗೂಡುತ್ತದೆ. ಉದ್ವೇಗಭರಿತಳಾದ ಅಂಬೆಯ ಮುಖದಲ್ಲಿ ಬಹುಬಗೆಯ ಭಾವಗಳು ತುಡಿಯುತ್ತಿರುತ್ತವೆ.)

ಭೀಷ್ಮ : ರಾಜಕುಮಾರಿ, ನಿನ್ನ ಮನದ ಸಂಕಟವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಅದರ ನಿವಾರಣೆಯ ಮಾರ್ಗವನ್ನು ನಾನೀಗಾಗಲೇ ಸೂಚಿಸಿದ್ದೇನೆ. ಅದರಂತೆ ನಡೆದರೆ ನಿನಗೆ ಒಳಿತಾಗುವುದು.

ಅಂಬೆ : ಲೋಕದಲ್ಲಿ ಯಾವ ಹೆಣ್ಣು ಸಿಲುಕಬಾರದಂಥ ಸಂಕಟಕ್ಕೆ ನನ್ನನ್ನು ಗುರಿಮಾಡಿ, ಈಗ ಉಪಕಾರದ ಮಾತುಗಳನ್ನಾಡುತ್ತಿದ್ದೀರ?

ಭೀಷ್ಮ : ಕ್ಷತ್ರಿಯ ಕುಲದಲ್ಲಿ ಹುಟ್ಟಿರುವ ನಿನಗೆ ರಾಜರ ಬಾಳು ಎಷ್ಟು ಅನಿಶ್ಚಿತವೆಂಬುದು ತಿಳಿಯದ ವಿಷಯವೇನಲ್ಲ. ನಮ್ಮ ಬಾಳು ಚದುರಂಗದಾಟವಿದ್ದಂತೆ. ಯಾವ ಗಳಿಗೆಯಲ್ಲಿ, ಯಾವ ಎಡೆಯಿಂದ, ಯಾವ ಬಗೆಯ ಆಪತ್ತು ಯಾರಿಂದ ತಟ್ಟುವುದೋ ಹೇಳಲಾಗದು. ನಿನ್ನನ್ನು ಇಂತಹ ವೇದನೆಗೆ ಸಿಲುಕಿಸಬೇಕೆಂದು ನಾನು ಕನಸು ಮನಸಿನಲ್ಲೂ ನೆನೆಸಿರಲಿಲ್ಲ...... ಆದರೆ ನಿನ್ನ ತಂದೆ ಮಾಡಿದ ತಪ್ಪೊಂದು ಇಷ್ಟೆಲ್ಲಾ ಅನಾಹುತಕ್ಕೆ ಎಡೆಕೊಟ್ಟಿತು.

ಅಂಬೆ : ನಮ್ಮ ತಂದೆ ಮಾಡಿದ ತಪ್ಪೇನು?

ಭೀಷ್ಮ : ನಮ್ಮ ಅರಸರನ್ನು ಸ್ವಯಂವರಕ್ಕೆ ಆಹ್ವಾನಿಸದಿದ್ದುದು.

ಅಂಬೆ : ಅದು ಮಹಾ ದೋಷವೇನು?

ಭೀಷ್ಮ : ಅಲ್ಲವೇ?

ಅಂಬೆ : ಹೆತ್ತ ತಂದೆಗೆ ಮಕ್ಕಳನ್ನು ಯಾರಿಗೆ ಕೊಡಬೇಕು? ಯಾರಿಗೆ ಕೊಡಬಾರದೆಂಬುದನ್ನು ನಿರ್ಧರಿಸುವ ಹಕ್ಕಿಲ್ಲವೇನು? ತಮ್ಮ ಮಕ್ಕಳ ಬಾಳಿನ ಭವಿಷ್ಯದ ಬಗೆಗೆ ಅವರು ವಿವೇಚಿಸುವುದು ಮಹಾ ಅಪರಾಧವೇನು?

ಭೀಷ್ಮ : ಹಸ್ತಿನಾಪುರದ ಅರಸರಿಗೆ ಮುಖಭಂಗ ಮಾಡಲೆಂದೇ ನಿನ್ನ ತಂದೆ ಆಹ್ವಾನಪತ್ರವನ್ನು ಕಳುಹಿಸಲಿಲ್ಲ.

ಅಂಬೆ : ಸಲ್ಲದ ಆರೋಪಕ್ಕೆ ನನ್ನ ತಂದೆಯನ್ನು ವಿನಾಕಾರಣ ಗುರಿ ಮಾಡಬೇಡಿ.
(ಕ್ಷಣಕಾಲ ಸುಮ್ಮನಿದ್ದು)
ಅಪಮಾನವಾದದ್ದು ಯಾರಿಗೆ?

ಭೀಷ್ಮ : ನಮ್ಮ ಅರಸರಿಗೆ.

ಅಂಬೆ : ಹಾಗಾದರೆ ನಿಮ್ಮ ಅರಸರೇಕೆ ಅಲ್ಲಿಗೆ ಬರಲಿಲ್ಲ? ಸ್ವಯಂವರ ಮಂಟಪದಲ್ಲಿ ತಮ್ಮ ಪರಾಕ್ರಮವನ್ನು ಮೆರೆದು ಅವರೇ ನಮ್ಮನ್ನಿಲ್ಲಿಗೆ ಕರೆತರಬಹುದಿತ್ತಲ್ಲ? ಹಾಗೇಕೆ ಮಾಡಲಿಲ್ಲ?

ಭೀಷ್ಮ : (ನಿರುತ್ತರನಾಗುತ್ತಾನೆ)

ಅಂಬೆ : ಏಕೆ? ಅರಸರ ಶೌರ್ಯದಲ್ಲಿ ನಿಮಗೆ ನಂಬಿಕೆಯಿರಲಿಲ್ಲವೇನು?

ಭೀಷ್ಮ : (ಸ್ವಲ್ಪ ಬೇಸರದ ಧ್ವನಿಯಿಂದ)

ಅದೆಲ್ಲಾ ನಮ್ಮ ರಾಜಕಾರಣದ ರಹಸ್ಯ. ಅದನ್ನು ಬಹಿರಂಗಪಡಿಸಬೇಕಾದ ಅಗತ್ಯವಿಲ್ಲ.

ಅಂಬೆ : ನಿಮ್ಮರಸರ ಪರಾಕ್ರಮದ ಟೊಳ್ಳುತನವೆಲ್ಲಿ ಬಯಲಾದೀತೆಂದು ಅಳುಕಿ, ಅವರನ್ನು ಕಳುಹಿಸದೆ ನೀವೇ ಬಂದಿರಲ್ಲವೇ?

ಭೀಷ್ಮ : (ಅಂಬೆಯ ಮುಖವನ್ನು ತೀಕ್ಷ್ಣವಾಗಿ ನೋಡುತ್ತಾನೆ.)

ಅಂಬೆ : ನಮ್ಮನ್ನು ಸ್ವಯಂ ಯೋಗ್ಯತೆಯಿಂದ ಪಡೆಯುವ ಬಾಹುಬಲವಿಲ್ಲದವರಿಗೆ, ನಮ್ಮನ್ನು ಗೌರವದಿಂದ ರಕ್ಷಿಸುವ ಶಕ್ತಿಯಿದೆಯೇನು?

ಭೀಷ್ಮ : [ಕೋಪದಿಂದ]
ಅಂಬೆ, ನಿನ್ನ ನಾಲಿಗೆ ಉದ್ದವಾಗುತ್ತಿದೆ.

ಅಂಬೆ : ನನ್ನ ನಾಲಿಗೆಯ ಉದ್ಧಟತನವೇ ನಿಮ್ಮನ್ನು ಇಷ್ಟು ಕೆರಳಿಸುತ್ತಿರಬೇಕಾದರೆ, ನಿಮ್ಮ ಪರಾಕ್ರಮದ ಒರಟುತನಕ್ಕೆ ಬಲಿಯಾಗಿ ನರಳುತ್ತಿರುವ ನನ್ನ ಮನದ ನೋವು ಎಂಥಹುದೆಂಬುದನ್ನು ಅರ್ಥಮಾಡಿಕೊಳ್ಳಲಾರಿರ?

ಭೀಷ್ಮ : ಎಲ್ಲರ ಮನಸ್ಸನ್ನು ಅರ್ಥಮಾಡಿಕೊಳ್ಳಬೇಕಾದ ಅಗತ್ಯ ನಮಗಿಲ್ಲ.

ಅಂಬೆ : ಹಾಗಾದರೆ ಕಾಶೀರಾಜ ಪುತ್ರಿಯರನ್ನು ನಿಮ್ಮ ಶೌರ್ಯದ ಯಜ್ಞಕ್ಕೆ ಬಲಿಪಶುಗಳನ್ನಾಗಿಸುವ ಅಗತ್ಯವೇನಿತ್ತು?

ಭೀಷ್ಮ : ರಾಜಕಾರಣದಲ್ಲಿ ಇಂಥಾ ಏರುಪೇರುಗಳು ಸರ್ವೇಸಾಮಾನ್ಯ. ಆದ ಘಟನೆಯನ್ನೇ ಮತ್ತೆ ಮತ್ತೆ ಕೆದಕುವುದರಿಂದ ಪ್ರಯೋಜನವಿಲ್ಲ. ವಿಹಿತವಾದ ಮಾರ್ಗದಲ್ಲಿ ತಾಳ್ಮೆಯಿಂದ ನಡೆಯುವುದೇ ನಿನಗೆ ಶ್ರೇಯಸ್ಕರ.

ಅಂಬೆ : [ವಿಷಾದಪೂರ್ಣ ಭಾವದಿಂದ]

ವಿಹಿತವಾದ ಮಾರ್ಗ.... ತಾಳ್ಮೆಯ ನಡೆ.... ಯಾವುದೆಂಬುದನ್ನು ತಾವು ಸೂಚಿಸುತ್ತೀರಾ?

ಭೀಷ್ಮ : ಸಾಲ್ವಲನ ಕೈ ಹಿಡಿಯುವುದು.

ಅಂಬೆ : ಅದು ಸೂಕ್ತವೇ?

ಭೀಷ್ಮ : ನೀನು ಬಾಲ್ಯದಿಂದಲೂ ಮೆಚ್ಚಿರುವ ಪುರುಷನನ್ನು ವರಿಸುವುದು ಯುಕ್ತವಲ್ಲವೇನು?

ಅಂಬೆ : ಆತ ಪುರುಷನಾಗಿದ್ದರೆ ನಿಮ್ಮ ಸಲಹೆಯನ್ನು ಒಪ್ಪಿಕೊಳ್ಳುತ್ತಿದ್ದೆ.

ಭೀಷ್ಮ : ನಿನ್ನ ಮಾತಿನ ಅರ್ಥ!

ಅಂಬೆ : ನಿಮ್ಮ ಪರಾಕ್ರಮದ ಮುಂದೆ ಹತವೀರ್ಯನಾಗಿರುವ ಅವನನ್ನು ನಾನು ವರಿಸಲೇನು?

ಭೀಷ್ಮ : ಒಮ್ಮೆ ಸೋತ ಮಾತ್ರಕ್ಕೆ ನಿನ್ನಿಂದ ದೂರವಾದನೆ!

ಅಂಬೆ : ಅಪಹರಣಕ್ಕೊಳಗಾದ ಹೆಣ್ಣನ್ನು ರಕ್ಷಿಸದೆ, ಹೇಡಿಯಂತೆ ಆತ ಸ್ವಯಂವರ ಮಂಟಪದಿಂದ ಪಲಾಯನ ಮಾಡಿದ್ದನ್ನು ನೀವೇ ಕಣ್ಣಾರ ಕಾಣಲಿಲ್ಲವೆ?

ಭೀಷ್ಮ : (ಮೌನದಿಂದಿರುತ್ತಾನೆ.)

ಅಂಬೆ : ಅದು ಗಂಡಾದವನು ಮಾಡುವ ಕಾರ್ಯವೇನು? ತನಗೊಲಿದಿರುವ ಹೆಣ್ಣಿನ ಮಾನಸಂರಕ್ಷಣೆ ಮಾಡಲು ಪ್ರಾಣವನ್ನಾದರೂ ಕಡೆಗಣಿಸಿ ಮುನ್ನುಗ್ಗದೇ, ಬೆನ್ನು ತೋರಿಸಿ ಓಡಿದ ಆತ ನನ್ನ ಪಾಲಿಗೆ ಅಂದೇ ಸತ್ತ; ಅವನ ಪಾಲಿಗೆ ನಾನು ಸತ್ತೆ.

ಭೀಷ್ಮ : ಒಂದು ವೇಳೆ ಆತ ನನ್ನೊಡನೆ ಹೋರಾಡುತ್ತಿದ್ದಾಗ ಸಾವನ್ನಪ್ಪಿದ್ದರೆ?

ಅಂಬೆ : ಅವನೊಡನೆ ಚಿತೆಯೇರುತ್ತಿದ್ದೆ.
(ತೀವ್ರವಾದ ಜುಗುಪ್ಸೆಯನ್ನು ಮುಖದಲ್ಲಿ ವ್ಯಕ್ತಪಡಿಸುತ್ತಾ)

ಈಗ ನನ್ನ ಮುಂದೆ ಅವನ ಹೆಸರನ್ನೂ ಎತ್ತಬೇಡಿ.

ಭೀಷ್ಮ : ಚಿಕ್ಕಂದಿನಿಂದಲೂ ಬಹುವಾಗಿ ಪ್ರೇಮಿಸಿದ್ದ ವ್ಯಕ್ತಿಯನ್ನು ಒಮ್ಮೆಲೆ ಇಷ್ಟೊಂದು ಕ್ಷುಲ್ಲಕವಾಗಿ ಕಾಣುವುದೇ?

ಅಂಬೆ : ಅವನೊಬ್ಬ ಷಂಡ, ದುರ್ಬಲ, ಹೇಡಿ. ಅವನೊಂದು ಗಂಡಿನ ರೂಪದ ಹೆಣ್ಣು. ಅವನೊಡನೆ ಕೂಡಿ ಹೇಗೆ ಬಾಳಲಿ?

ಭೀಷ್ಮ : ಸಣ್ಣದನ್ನೆ ದೊಡ್ಡದನ್ನಾಗಿ ಮಾಡಿಕೊಂಡು ತಳಮಳಿಸುತ್ತಿರುವೆ. ಮತ್ತೊಮ್ಮೆ ನಿಧಾನವಾಗಿ ಆಲೋಚಿಸಿ ನೋಡು. ಬಾಳಿನುದ್ದಕ್ಕೂ ಯಾರನ್ನು ಕೂಡಿ ಬಾಳಬೇಕೆಂದು ಹಂಬಲಿಸಿದ್ದೆಯೋ, ಅವನನ್ನು ತಿರಸ್ಕರಿಸಬೇಡ. ನಿನ್ನ ನಿರ್ಧಾರವನ್ನು ಬದಲಿಸು.

ಅಂಬೆ : ಅದು ಸಾಧ್ಯವೇ ಇಲ್ಲ.

ಭೀಷ್ಮ : ನಿನ್ನ ಮೊಂಡುತನವನ್ನು ಬಿಡಲಾರೆಯ?

ಅಂಬೆ : ಇದು ಮೊಂಡುತನವಲ್ಲ ರಾಜಕುಮಾರ. ನಿಮ್ಮನ್ನು ಪಡೆಯುವುದಕ್ಕೆ ಎಲ್ಲಾ ರೀತಿಯಿಂದಲೂ ನಾನು ಅರ್ಹಳಾಗಿದ್ದೇನೆ. ನನ್ನನ್ನು ನೀವು ನಿರಾಕರಿಸುವುದಕ್ಕೆ ಸಾಧ್ಯವೇ ಇಲ್ಲ.

ಭೀಷ್ಮ : ಏಕೆ?

ಅಂಬೆ : ಚಂದ್ರವಂಶದ ರಾಜಕುವರನಾದ ನೀವು, ಆಡಿದ ಮಾತಿಗೆ ತಪ್ಪಿ ನಡೆಯುವುದು ಅಧರ್ಮವಾಗುವುದಿಲ್ಲವೇ?

ಭೀಷ್ಮ : (ಅಚ್ಚರಿಯಿಂದ)
ಯಾವ ಮಾತಿಗೆ?

ಅಂಬೆ : ನಮ್ಮನ್ನು ಅಪಹರಿಸಿ ತರುವಾಗ ಸ್ವಯಂವರ ಮಂಟಪದಲ್ಲಿ ತಾವಾಡಿದ ನುಡಿಗಳ ಜ್ಞಾಪಕವಿದೆಯೇ?

ಭೀಷ್ಮ : (ಆಲೋಚನಾಮಗ್ನನಾಗುತ್ತಾನೆ.)

ಅಂಬೆ : (ಆವೇಶಪೂರ್ಣಳಾಗಿ)
ಪರಾಕ್ರಮದ ಮತ್ತಿನಲ್ಲಿದ್ದ ನಿಮಗೆ ಅವುಗಳ ಜ್ಞಾಪಕವಿರಲಾರದು. ಆದರೆ ನೊಂದಿರುವ ನನ್ನೆದೆಯಲ್ಲಿ ಅವು ನಾಟಿವೆ.

ಭೀಷ್ಮ : (ತೀಕ್ಷ್ಣ ದೃಷ್ಟಿಯಿಂದ ನೋಡುತ್ತಾನೆ.)

ಅಂಬೆ : ವರಣಮಾಲೆಯನ್ನು ಹಿಡಿದು ಮಂಗಳಮಂಟಪದಲ್ಲಿ ನಡೆದಾಡುತ್ತಿದ್ದ ನಮ್ಮನ್ನು ಅಡ್ಡಗಟ್ಟಿ ನಿಂತು, ನೀವಾಡಿದ ನುಡಿಗಳನ್ನು ನೆನಪಿಗೆ ತರಲೇನು?

[ಉದ್ವಿಗ್ನಳಾಗಿದ್ದ ಆಕೆಯ ಕಂಠದ ಧ್ವನಿ ಏರುತ್ತದೆ.]

"ನೆರೆದಿರುವ ವೀರರೇ ಕೇಳಿ, ಎಲ್ಲ ಬಗೆಯ ವಿವಾಹಕ್ಕಿಂತ ಹೆಣ್ಣನ್ನು ಪರಾಕ್ರಮದಿಂದ ವರಿಸುವುದೇ ಅತಿ ಪ್ರತಿಷ್ಠಿತವಾದದ್ದು. ಪುರುಷನ ಶೌರ್ಯಕ್ಕೆ ಹೆಣ್ಣು ಒಲಿಯುವಳೇ ಹೊರತು, ಅವನ ಅಲಂಕಾರಕ್ಕಲ್ಲ. ಇದೀಗ ನನ್ನ ಶೌರ್ಯವನ್ನೇ ನಿಮ್ಮ ಮುಂದೆ ಪಣವಾಗಿ ಒಡ್ಡಿ ಈ ಮದುವಣಗಿತ್ತಿಯರನ್ನು ವಶಪಡಿಸಿಕೊಂಡಿದ್ದೇನೆ. ಈಗ ನನ್ನೊಡನೆ ಹೋರಾಡಿ ಇವರನ್ನು ಪಡೆಯಿರಿ; ಇಲ್ಲದಿದ್ದರೆ ಇವರು ನನ್ನವರು" ಎಂದು ಆರ್ಭಟಿಸಿದ್ದು ನಿಜವಲ್ಲವೇನು?

ಭೀಷ್ಮ : (ನಿರುತ್ತರನಾಗುತ್ತಾನೆ.)

ಅಂಬೆ : ಸ್ವಯಂವರ ಮಂಟಪದಲ್ಲಿ "ಇವರು ನನ್ನವರು" ಎಂದು ನುಡಿದು, ಎಲ್ಲರನ್ನು ಸದೆಬಡಿದು ನಮ್ಮನ್ನು ಗೆದ್ದು ತಂದಿರಿ. ಈಗ ನಾವು ಧರ್ಮನಿಷ್ಠರಾಗಿ ಕೈ ಹಿಡಿಯಬೇಕಾದ್ದು ಯಾರನ್ನ? .....ನಿಮ್ಮಾಜ್ಞೆಯ ಬಲಾತ್ಕಾರಕ್ಕೆ ನನ್ನ ತಂಗೆಯರು ಮಣಿದರು. ಆದರೆ ಅವರಂತಾಗಲು ಈ ಜನ್ಮದಲ್ಲೆ ನಾನು ಸಿದ್ಧಳಿಲ್ಲ. ಸಾಲ್ವಲನೊಡನೆ ವಿವಾಹವಾಗಬೇಕೆಂಬ ನಿಮ್ಮ ವಿವೇಕ ಯಾರಿಗೆ ಹಿತವಾದದ್ದು? ಆಡಿದ ನುಡಿಗೆ ತಪ್ಪಿ ನಡೆದು ಕಳಂಕಕ್ಕೆ ಗುರಿಯಾಗಬೇಡಿ. ಈಗ ತಾಳ್ಮೆಯಿಂದ ವಿವೇಚಿಸ ಬೇಕಾಗಿರುವುದು ನಾನಲ್ಲ, ನೀವು.

ಭೀಷ್ಮ : ಕಾರ್ಯ ಸಾಧನೆಯ ಆವೇಗದಲ್ಲಿ ನಾನಾಡಿದ ನುಡಿಗಳನ್ನೇ ಪಟ್ಟು ಹಿಡಿದು ವಾದಿಸಬೇಡ.

ಅಂಬೆ : ಹಾಗಾದರೆ, ನಿಮ್ಮ ಮೊದಲಿನ ನಿರ್ಧಾರವು ಕಾರ್ಯ ಸಾಧನೆಯೊಂದಕ್ಕಾಗಿ ಆಡಿದ ನುಡಿಯಲ್ಲವೇನು? ಅದನ್ನೇಕೆ ಬಾಳಿನುದ್ದಕ್ಕೂ ಎಳೆದು ತರುತ್ತಿರುವಿರಿ?

ಭೀಷ್ಮ : ಧರ್ಮದ ನಡೆ ಅತ್ಯಂತ ಸೂಕ್ಷ್ಮವಾದದ್ದು. ಅದು ವಾದಕ್ಕೆ ಎಟುಕುವಂತಹುದಲ್ಲ.

ಅಂಬೆ : ಅಗತ್ಯಕ್ಕೆ ತಕ್ಕಂತೆ.... ಕಾಲಕ್ಕೆ ತಕ್ಕಂತೆ.... ವ್ಯಕ್ತಿಗೆ ತಕ್ಕಂತೆ ಧರ್ಮ ಬದಲಾಗುವುದೇನು?

ಭೀಷ್ಮ : ಅದು ನನ್ನ ವೈಯಕ್ತಿಕ ಜೀವನಕ್ಕೆ ಸಂಬಂಧಪಟ್ಟಿದ್ದು. ಅದನ್ನು ಪ್ರಶ್ನಿಸಬೇಡ.

ಅಂಬೆ : ಇದು ನನ್ನ ಬಾಳಿಗೆ ಸಂಬಂಧಪಟ್ಟಿದ್ದು. ಅದಕ್ಕಾಗಿ ಪ್ರಶ್ನಿಸುತ್ತಿದ್ದೇನೆ.

ಭೀಷ್ಮ : (ಸ್ವಲ್ಪ ಕೋಪದಿಂದ)

ಅಂಬೆ, ವ್ಯರ್ಥ ಸಾಹಸವನ್ನೆಸಗಬೇಡ. ಹಿಡಿದ ಹಠವನ್ನು ಬಿಡು.

ಅಂಬೆ : ಹಠ ನನ್ನದೋ?.... ನಿಮ್ಮದೋ?

ಭೀಷ್ಮ : ನನ್ನನ್ನೇ ಪಡೆದು ಬಾಳಬೇಕೆಂಬುದು ಹಠವಲ್ಲದೆ ಮತ್ತೇನು? ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಂಡು ಬಾಳುವುದು ಮುಖ್ಯವಲ್ಲವೇ?

ಅಂಬೆ : ಹಸಿದ ಹುಲಿ ಹುಲ್ಲನ್ನು ತಿಂದು ಬಾಳಲಿಚ್ಛಿಸುವುದೇ?

(ಅಷ್ಟರಲ್ಲಿ ಬಾಗಿಲ ಬಳಿಯಲ್ಲಿ ಬಂದು ನಿಂತು ಭೀಷ್ಮರ ಆಪ್ತಸೇವಕ ವಂದಿಸುತ್ತಾನೆ. ಭೀಷ್ಮರು ಅವನತ್ತ ನೋಡುತ್ತಾರೆ.)

ಸೇವಕ : ಅಮಾತ್ಯರು ಬಂದು ಬಹು ಹೊತ್ತಾಯಿತು. ತಮ್ಮನ್ನ ಕಾಣಲೆಂದು ಕಾಯುತ್ತಿದ್ದಾರೆ.

ಭೀಷ್ಮ : ಇದೀಗ ಬರುವರೆಂದು ತಿಳಿಸು.
(ಸೇವಕನು ಹಿಂತಿರುಗುತ್ತಾನೆ. ಅಂಬೆಯತ್ತ ತಿರುಗಿ)
ಉದ್ವೇಗದ ಮನಸ್ಸನ್ನು ಶಾಂತಪಡಿಸಿಕೊ. ಈಗಲೂ ಕಾಲ ಮಿಂಚಿಲ್ಲ.

ವಿವೇಚನೆಯ ಹಾದಿಯಲ್ಲಿ ನಡೆಯಲೆತ್ನಿಸು. ಹಠಸಾಧನೆಯಿಂದ ಯಾವ ಪ್ರಯೋಜನವೂ ಇಲ್ಲ.

ಅಂಬೆ : ನಿಮ್ಮನ್ನಲ್ಲದೆ ಮತ್ತಾರನ್ನೂ ನಾನು ಕನಸು ಮನಸಿನಲ್ಲೂ ನೆನೆಸಲಾರೆ.

ಭೀಷ್ಮ : ಈ ಬಗೆಯ ನಿರ್ಧಾರದಿಂದ ನಿನಗೆ ಒಳಿತಾಗುವುದಿಲ್ಲ.

ಅಂಬೆ : ಒಳ್ಳೆಯದೋ ಕೆಟ್ಟದ್ದೋ ನಿಮ್ಮನ್ನೇ ಪಡೆಯುತ್ತೇನೆ.

ಭೀಷ್ಮ : (ಅಂಬೆಯ ಕಟು ನಿರ್ಧಾರದ ನುಡಿಗಳನ್ನು ಕೇಳಿ ಭೀಷ್ಮರಿಗೆ ಒಂದು ಬಗೆಯ ಕಸಿವಿಸಿಯಾಗುತ್ತದೆ.)
ನನಗಾಗಿ ಅಮಾತ್ಯರು ಕಾಯುತ್ತಿದ್ದಾರೆ.

ಅಂಬೆ : ನನ್ನ ಬಾಳಿಗೆ ಬೆಂಕಿಯಿಟ್ಟು, ನೀವು ನೆಮ್ಮದಿಯಿಂದಿರಲು ಬಯಸುತ್ತಿದ್ದೀರಾ?

ಭೀಷ್ಮ : ನಿನ್ನೊಡನೆ ಹೆಚ್ಚು ವಾದಿಸಲಾರೆ.

ಅಂಬೆ : ನಮ್ಮ ವಂಶದ ಕಿಚ್ಚು, ನಿಮ್ಮ ವಂಶವನ್ನು ಸುಡದೆ ಬಿಡದು.

ಭೀಷ್ಮ : ಕಾಳ್ಗಿಚ್ಚು ಉರಿದೆದ್ದಾಗ ಹಸಿಯಾದ್ದು, ಒಣಗಿದ್ದೆಲ್ಲವೂ ಸುಟ್ಟು ನಾಶವಾಗುತ್ತದೆ. ಅದಕ್ಕಾಗಿ ಅಂಜಬೇಕಾದ ಅಗತ್ಯವಿಲ್ಲ.
(ಭೀಷ್ಮರ ನುಡಿಗಳಿಂದ ಅಂಬೆ ಕೆರಳುತ್ತಾಳೆ. ಆಕೆಯ ಕಣ್ಣುಗಳಲ್ಲಿ ತೀವ್ರವಾದ ಕೋಪೋದ್ರೇಕ ಹೊರಹೊಮ್ಮುತ್ತಿರುತ್ತದೆ. ಅಪಮಾನದ ನೋವು ಅವಳ ಮುಖದಲ್ಲಿ ಎದ್ದು ಕಾಣುತ್ತಿರುತ್ತದೆ. ತೀರಾ ಉದ್ವಿಗ್ನಳಾಗಿರುವ ಅಂಬೆ ಏದುಸಿರನ್ನು ಬಿಡುತ್ತಿರುತ್ತಾಳೆ. ತಕ್ಷಣವೇ ಅಲ್ಲಿಂದೆದ್ದು ಹೊರಡುತ್ತಾಳೆ.)

ಮಾಲಿನಿ : ನಾವಿನ್ನು ಬರುತ್ತೇವೆ.

ಭೀಷ್ಮ : (ಮೌನದಿಂದಲೇ ತಲೆಯಾಡಿಸುತ್ತಾನೆ. ಅಂಬೆ ಮತ್ತು ಮಾಲಿನಿಯರು ಅಲ್ಲಿಂದ ಹೋಗುತ್ತಿರುವುದನ್ನು ನಿಟ್ಟಿಸಿ ನೋಡುತ್ತಾ ನಿಂತಿರುವ ಭೀಷ್ಮನ ಅಂತರಂಗದಲ್ಲಿ ನಾನಾ ಬಗೆಯ ಭಾವನೆಗಳು ಕೆರಳತೊಡಗುತ್ತವೆ. ಲಾವಣ್ಯವತಿಯಾದ ಅಂಬೆಯ ದೇಹದ ಅತ್ಯಾಕರ್ಷಕ ಸೌಂದರ್ಯವು ಅವನ ಮನದ ತಳಮಳಕ್ಕೆ ಕಾರಣವಾಗುತ್ತದೆ. ಅವಳ ಕಣ್ಣಿನ ಮಾಟ, ಮುಖದ ಚೆಲುವು, ಯೌವನ

ಭರಿತವಾದ ದೇಹದ ಕಾಂತಿ ಭೀಷ್ಮನ ಮನದ ಮೇಲೆ ಅಚ್ಚೊತ್ತಿದ್ದವು.)

ಮನಸ್ಸು 1 : ಅಬ್ಬಾ ಎಂಥಾ ಚೆಲುವೆ! ಅಪ್ಸರೆಯನ್ನು ಮೀರಿಸುವಂಥ ತೇಜಸ್ವಿನಿ, ಬಹು ದಿಟ್ಟೆ. ಇಂಥಾ ಹೆಣ್ಣೇ ಅಪರೂಪವೆಂದು ಕಾಣುತ್ತದೆ. ಇವಳನ್ನು ಪತ್ನಿಯನ್ನಾಗಿ ಪಡೆಯುವವನು ಅದೃಷ್ಟವಂತ.

ಮನಸ್ಸು 2 : ಆ ಅದೃಷ್ಟ ನನ್ನದೇ ಏಕಾಗಬಾರದು? ಬಳಿಗೆ ಬಂದಿರುವ ಭಾಗ್ಯವನ್ನೇಕೆ ನಿರಾಕರಿಸುವುದು? ಇಂಥಾ ಧೀರೆಯನ್ನು ಕೈ ಹಿಡಿದರೆ ನಿಜಕ್ಕೂ ಜೀವನ ಸಾರ್ಥಕವಾಗುತ್ತದೆ.

ಮನಸ್ಸು 1 : ಆದರೆ ಅದು ಸಾಧ್ಯವೇ? ಅಂದು ದಾಶರಾಜನಿಗೆ ಕೊಟ್ಟಿರುವ ಮಾತಿಗೆ ತಪ್ಪಿ ನಡೆಯಲೆ?

ಮನಸ್ಸು 2 : ಅದರಲ್ಲೇನು ತಪ್ಪÂ? ನಾನಾಗಿಯೆ ಯಾವ ಹೆಣ್ಣನ್ನೂ ಈವರೆಗೆ ಬಯಸಲಿಲ್ಲ. ಈಗ ಕಾಲ ಕೂಡಿ ಬಂದಿರಬೇಕು. ಅದಕ್ಕಾಗಿ ಏನೋ ಅಂಬೆ ನನ್ನತ್ತ ಒಲಿದಿದ್ದಾಳೆ.

ಮನಸ್ಸು 1 : ಆದರೆ ಲೋಕ ಸುಮ್ಮನಿರುತ್ತದೆಯೇ? ನಾನು ಕೊಟ್ಟಿರುವ ಭಾಷೆಯನ್ನು ಎತ್ತಿ ಆಡುತ್ತಾ, ನನ್ನ ಹೆಸರಿಗೆ ಮಸಿ ಬಳಿಯುವುದಿಲ್ಲವೇ?

ಮನಸ್ಸು 2 : ಹೆಸರಿಗೇಕೆ ಅಷ್ಟು ಬೆಲೆ ಕೊಡುವುದು? ನನ್ನ ಜೀವನದ ಸುಖ ನನಗೆ ಮುಖ್ಯ.

ಮನಸ್ಸು 1 : ನನ್ನ ಸುಖವೇ ಮುಖ್ಯವಾಗಿದ್ದರೆ, ಅಂದು ತಂದೆಗಾಗಿ ನಾನು ಮಾತು ಕೊಡಬೇಕಾಗಿರಲಿಲ್ಲ. ಈಗ ಆ ಭಾಷೆಗೆ ತಪ್ಪಿ ನಡೆದರೆ ಸಾವಿಗಿಂತಲೂ ಭೀಕರವಾದ ಅಪಕೀರ್ತಿ ಬರುತ್ತದಲ್ಲ.

ಮನಸ್ಸು 2 : ಹಾಗಾದರೆ ಜೀವನದ ಉದ್ದಕ್ಕೂ ಹೀಗೆ ಏಕಾಂಗಿಯಾಗಿಯೇ ಉಳಿಯುವೆಯಾ ?

ಮನಸ್ಸು 1 : ಇದೇನು? ಇಂದು ಈ ಬಗೆಯ ಚಿಂತೆ. ಅಂದು ಭಾಷೆ ಕೊಡುವಾಗಲೇ ಇದನ್ನೆಲ್ಲ ಆಲೋಚಿಸಬೇಕಿತ್ತು.

ಮನಸ್ಸು 2 : ಅಯ್ಯೋ....ಆಗ ನನಗೆ ಇಷ್ಟೊಂದು ಅನುಭವವೇ ಇರಲಿಲ್ಲ. ಅದೂ ಅಲ್ಲದೆ ಚಿಕ್ಕಮ್ಮನವರಿಗಾಗಿ ಪರಿತಪಿಸುತ್ತಿದ್ದ ತಂದೆಯವರ ಸ್ಥಿತಿ ಅಂದು ಚಿಂತಾಜನಕವಾಗಿತ್ತು. ನನ್ನ ಸ್ಥಾನದಲ್ಲಿ ಯಾರೇ ಇದ್ದರೂ ತಂದೆಯನ್ನು

ಉಳಿಸಿಕೊಳ್ಳುವುದಕ್ಕಾಗಿ ಅಂಥಾ ಭಾಷೆಯನ್ನೇ ಕೊಡುತ್ತಿದ್ದರು.

ಮನಸ್ಸು 1 : ಏಕೋ...ಏನೋ... ಅಂಬೆಯ ಆಶೆಯನ್ನು ಕೇಳಿದಾಗಿನಿಂದ ನನ್ನಲ್ಲಿ ಹೆಣ್ಣಿನ ಬಗೆಗೆ ಆಸಕ್ತಿ ಬೆಳೆಯುತ್ತಿದೆ. ನನ್ನೊಳಗಿನ ಕಾಮನೆಗಳನ್ನು ಕೆರಳಿಸುವ ಶಕ್ತಿಯಾಗಿ ಈಕೆ ಬಂದಿರುವಂತೆ ಕಾಣುತ್ತಿದೆ.

ಮನಸ್ಸು 2 : ವಯಸ್ಸಿಗೆ ಬಂದ ಗಂಡು ಹೆಣ್ಣು ಪರಸ್ಪರ ಕೂಡಿ ಬಾಳುವುದು ಪ್ರಕೃತಿ ಧರ್ಮ. ಅದನ್ನೇಕೆ ನಾನು ವಿರೋಧಿಸುವುದು.

ಮನಸ್ಸು 1 : ಅವಳನ್ನು ಕೈ ಹಿಡಿದರೆ, ಜನರ ಕಣ್ಣಿನಲ್ಲಿ ನಾನೊಬ್ಬ ಕ್ಷುಲ್ಲಕ ವ್ಯಕ್ತಿಯಾಗುತ್ತೇನಲ್ಲವೇ? "ಕೊಟ್ಟ ಭಾಷೆಗೆ ತಪ್ಪಿ ನಡೆದವನು; ಹೆಣ್ಣುಗಳನ್ನು ಇದಕ್ಕಾಗಿಯೇ ಹೊತ್ತುಕೊಂಡು ಬಂದ ಕಾಮುಕ; ಹೆಣ್ಣಿನ ಸಂಗವೇ ಬೇಡವೆಂದು ನಾಟಕವಾಡಿ, ಒಳಗೊಳಗೆ ತಳಮಳಿಸಿದ ಗೋಮುಖ ವ್ಯಾಘ್ರ" ಎಂದು ಬಹುಬಗೆಯಲ್ಲಿ ನಿಂದಿಸತೊಡಗುತ್ತಾರಲ್ಲ!. ಏನು ಮಾಡುವುದು?

ಮನಸ್ಸು 2 : ನಿಂದೆ ಈ ಜಗತ್ತಿನಲ್ಲಿ ಯಾರಿಗೂ ತಪ್ಪಿದ್ದಲ್ಲ. ಅದಕ್ಕೆ ನಾನೇಕೆ ಹೆದರಬೇಕು. ನನ್ನ ಮನದ ನೇರಕ್ಕೆ ತಕ್ಕಂತೆ ಬಾಳಿದರಾಯಿತು.

ಮನಸ್ಸು 1 : ಆದರೆ ಈ ಜಗತ್ತಿಗೆ ಅಂಜದೆ ಬಾಳಲು ಸಾಧ್ಯವಿಲ್ಲ.... ನಾನೋ ಪ್ರಸಿದ್ಧ ರಾಜವಂಶದಲ್ಲಿ ಹುಟ್ಟಿರುವ ವ್ಯಕ್ತಿ; ನಾಲ್ಕು ಮಂದಿಯ ಮುಂದೆ ಭಾಷೆ ಕೊಟ್ಟಿರುವವನು ; ಭೀಷ್ಮನೆಂಬ ಕೀರ್ತಿಯನ್ನು ಪಡೆದಿರುವವನು.....ಅಯ್ಯೋ... ಈ ನನ್ನ ಕೀರ್ತಿ....ಈ ರಾಜವಂಶದ ಹಿರಿಮೆ....ಇವೇ ನನ್ನ ಬಾಳಿಗೆ ಶತ್ರುವಾಯಿತಲ್ಲ!... ನಾನೊಬ್ಬ ಅನಾಮಧೇಯನಾಗಿ ಹುಟ್ಟಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!

ಮನಸ್ಸು 2 : ಹುಟ್ಟಿದ್ದರೆ ಚೆನ್ನಾಗಿತ್ತು. ಆದರೆ ಈಗ ಆ ರೀತಿ ಇಲ್ಲವಲ್ಲ. ಏನು ಮಾಡುವುದು? (ತನ್ನ ನಿಸ್ಸಹಾಯಕತನಕ್ಕೆ ತಾನೇ ಮರುಗುತ್ತಾ, ವಿಷಾದಪೂರ್ಣವಾದ ನಿಟ್ಟುಸಿರನ್ನು ಬಿಡುತ್ತಾ ಪೀಠವೊಂದರ ಮೇಲೆ ಭೀಷ್ಮ ಕುಳಿತುಕೊಳ್ಳುತ್ತಾನೆ.)

ದೃಶ್ಯ-4

[ಅಂತಃಪುರದ ಕೊಠಡಿಯೊಂದರಲ್ಲಿ ಅಂಬೆ ಮತ್ತು ಮಾಲಿನಿಯರು ದೀರ್ಘವಾದ ಸಮಾಲೋಚನೆಯಲ್ಲಿ ತೊಡಗಿದ್ದಾರೆ]

ಮಾಲಿನಿ : ನಮ್ಮ ಪ್ರಯತ್ನಗಳೆಲ್ಲಾ ಗೋರ್ಕಲ್ಲಿನ ಮೇಲೆ ಮಳೆ ಸುರಿದಂತಾಯಿತಲ್ಲವೇ, ದೇವಿ.

ಅಂಬೆ : ಇಷ್ಟರಿಂದಲೇ ನಾವು ನಿರಾಶರಾಗಬೇಕಾದ್ದಿಲ್ಲ, ಮಾಲಿನಿ. ಇದು ನಮ್ಮ ಪ್ರಯತ್ನದ ಮೊದಲನೆಯ ದಾಳಿ. ಅವನ ಮನಸ್ಸನ್ನು ಮತ್ತೆ ಮತ್ತೆ ಘಾಸಿಗೊಳಿಸುವಂಥ ಸನ್ನಿವೇಶಗಳನ್ನು ತಂದೊಡ್ಡಿ ಎಂತಾದರೂ ಮಾಡಿ ಅವನ ನಿರ್ಧಾರವನ್ನು ಚಂಚಲಗೊಳಿಸಬೇಕು.

ಮಾಲಿನಿ : ಇದೇನು ದೇವಿ? ಶತ್ರುವಿನ ಕೋಟೆಯ ಮೇಲೆ ಲಗ್ಗೆ ಹಾಕುವ ಸೇನಾಧಿಪತಿಯಂತೆ ನುಡಿಯುತ್ತಿದ್ದೀರಲ್ಲ!

ಅಂಬೆ : ಹೌದು ಮಾಲಿನಿ. ಇದೂ ಒಂದು ಬಗೆಯ ಯುದ್ಧ. ಇಬ್ಬರಲ್ಲೊಬ್ಬರು ಗೆಲ್ಲಬೇಕು ಇಲ್ಲವೇ ಇಬ್ಬರೂ ಅಳಿಯಬೇಕು.

ಮಾಲಿನಿ : ಮುಂದಿನ ಮಾರ್ಗ ಯಾವುದು ದೇವಿ?

ಅಂಬೆ : ನಾನು ಅದನ್ನೇ ಚಿಂತಿಸುತ್ತಿದ್ದೇನೆ.
(ಸ್ವಲ್ಪ ಕಾಲ ಇಬ್ಬರೂ ಆಲೋಚನಾಮಗ್ನರಾಗುತ್ತಾರೆ.)

ಮಾಲಿನಿ : ಭೀಷ್ಮರು ಧರ್ಮಪ್ರಜ್ಞೆಯುಳ್ಳವರು. ತಾವು ಮಾಡಿದ ತಪ್ಪನ್ನು ತಾವೇ ಅರಿತುಕೊಳ್ಳುವಂಥ ಸಾತ್ತ್ವಿಕ ವ್ಯಕ್ತಿ. ಆದ್ದರಿಂದ...

ಅಂಬೆ : ಆದ್ದರಿಂದ...

ಮಾಲಿನಿ : ಅವರನ್ನು ಧರ್ಮದ ಮೂಲಕವಾಗಿಯೇ ವಶಪಡಿಸಿಕೊಳ್ಳಬೇಕು. ಅವರ ಮನಸ್ಸಿನ ಮೇಲೆ ಪ್ರಭಾವ ಬೀರುವಂಥ ಪೂಜ್ಯ ವ್ಯಕ್ತಿಗಳನ್ನು ನಾವು ಆಶ್ರಯಿಸಿದರೆ ಖಂಡಿತ ನಮ್ಮ ಕಾರ್ಯಸಾಧನೆಯಾಗುತ್ತದೆ, ದೇವಿ.

ಅಂಬೆ : ಅವರಿಗೆ ಪೂಜ್ಯರಾದ ವ್ಯಕ್ತಿಗಳು ಯಾರು?

ಮಾಲಿನಿ : ಒಬ್ಬರ ಬಗೆಗೆ ಈಗಾಗಲೇ ಕೇಳಿ ತಿಳಿದಿದ್ದೇನೆ.

ಅಂಬೆ : ಯಾರವರು?

ಮಾಲಿನಿ : ಭೀಷ್ಮರಿಗೆ ಬಾಲ್ಯದಲ್ಲಿ ವೇದವಿದ್ಯೆಯನ್ನು ಮತ್ತು ಅಸ್ತ್ರವಿದ್ಯೆಯನ್ನು ಬೋಧಿಸಿದ ಮಹರ್ಷಿ ಪರಶುರಾಮರು.

ಅಂಬೆ : ಅವರನ್ನು ಅವತಾರ ಪುರುಷರೆಂದೇ ಜನ ಹೇಳುತ್ತಾರಲ್ಲವೇ?

ಮಾಲಿನಿ : ಹೌದು ದೇವಿ.

ಅಂಬೆ : ಚಿಕ್ಕಂದಿನಿಂದಲೂ ನಾನವರ ಪರಾಕ್ರಮವನ್ನು ತಂದೆಯವರಿಂದ ಕೇಳಿ ಬಲ್ಲೆನು. ಅಂಥ ಮಹಾಶಕ್ತಿ ಸಂಪನ್ನರ ಆಶ್ರಯವನ್ನು ಪಡೆಯುವುದು ಹೇಗೆ, ಮಾಲಿನಿ.

ಮಾಲಿನಿ : ನೀವು ಮೊದಲೇ ತಿಳಿಸಿರುವಂತೆ ನಮಗಿರುವುದು ಒಂದೇ ಮಾರ್ಗವಲ್ಲವೇ?

ಅಂಬೆ : ಯಾವುದದು?

ಮಾಲಿನಿ : ನೇರವಾದ ಮಾರ್ಗ.... ಈಗ ಅವರು ಇಲ್ಲಿಗೆ ಸಮೀಪದಲ್ಲಿನ ಯಮುನಾ ನದಿ ತೀರದ ಆಶ್ರಮವೊಂದರಲ್ಲಿ ನೆಲೆಸಿದ್ದಾರಂತೆ. ಅಲ್ಲಿಗೆ ಹೋಗಿ ನಮ್ಮ ಸಂಕಟದ ಕಥೆಯನ್ನು ಅವರ ಕರುಣೆಗೆ ಪಾತ್ರವಾಗುವಂಥ ರೀತಿಯಲ್ಲಿ ಹೇಳಿಕೊಳ್ಳೋಣ. ತಮ್ಮ ಶಿಷ್ಯನಿಂದಾಗಿರುವ ಅನ್ಯಾಯವನ್ನು ಸರಿಪಡಿಸಿಕೊಡಿರೆಂದು ನ್ಯಾಯಭಿಕ್ಷೆಗಾಗಿ ಯಾಚಿಸೋಣ.

ಅಂಬೆ : ಒಂದು ವೇಳೆ ಅವರು ನಮ್ಮ ಬಗ್ಗೆ ಕರುಣೆ ತೋರದಿದ್ದರೆ?

ಮಾಲಿನಿ : ಖಂಡಿತ ಹಾಗಾಗುವುದಿಲ್ಲ. ಹೆಣ್ಣಿನ ಬಾಳಿನ ದುರಂತವನ್ನು ಕಂಡು ಮರುಗದ ಗಂಡು ಈ ಜಗತ್ತಿನಲ್ಲಿಲ್ಲ.

ಅಂಬೆ : ಹೇಗೆ ಹೇಳುವೆ?

ಮಾಲಿನಿ : ಎಲ್ಲರೂ ಹೆಣ್ಣಿನ ಗರ್ಭದಿಂದ ಮೂಡಿಬಂದವರಲ್ಲವೇ ದೇವಿ. ಮಾತೃವಿನ ಆ ಅಂಶವಾದರೂ ಅವರಲ್ಲಿ ಕರುಣೆಯನ್ನು ಮಿಡಿಸುತ್ತದೆ.

ಅಂಬೆ : (ಅವಳ ಬಗ್ಗೆ ತನ್ನ ಮೆಚ್ಚುಗೆಯನ್ನು ಕಣ್ಣುಗಳಲ್ಲಿ ಸೂಚಿಸುತ್ತಾ)

ನಿನ್ನ ವಿವೇಕ... ಸಾಹಸಗಳೇ ನನಗೀಗ ದಿಕ್ಕು. ನನ್ನ ಬಳಿ ನೀನಿಲ್ಲದಿದ್ದರೆ, ಬಹುಶಃ ಈ ವೇಳೆಗೆ ನನ್ನ ಕಥೆ ಮುಗಿಯುತ್ತಿತ್ತೆಂದು ಕಾಣುತ್ತದೆ.

ಮಾಲಿನಿ : ಅಶುಭದ ಮಾತನ್ನೇಕೆ ಆಡುವಿರಿ ದೇವಿ?

ಅಂಬೆ : ಇನ್ನೂ ನಿನ್ನ ಒಡತಿಯ ಪಾಲಿಗೆ ಶುಭವನ್ನೇ ಹಾರೈಸುತ್ತಿರುವೆಯಾ ಮಾಲಿನಿ?

ಮಾಲಿನಿ : ನಮ್ಮ ಬಾಳು ಇರುವುದು ಮಂಗಳವನ್ನು ಕಾಣುವುದಕ್ಕೆ ಹೊರತು, ಬರುವ ದುರಂತಗಳಿಗೆ ಸುಮ್ಮನೆ ತಲೆಯೊಡ್ಡುವುದಕ್ಕಾಗಿಯಲ್ಲ, ದೇವಿ.

ಅಂಬೆ : [ಮಾಲಿನಿಯ ಮಾತುಗಳನ್ನು ಕೇಳುತ್ತಿದ್ದಂತೆಯೇ ಯಾವುದೋ ಒಂದು ಬಗೆಯ ವೇದನೆಗೆ ಒಳಗಾಗುತ್ತಾಳೆ. ದೀರ್ಘವಾಗಿ ನಿಟ್ಟುಸಿರು ಬಿಡುತ್ತಾಳೆ.]

ಮಾಲಿನಿ : ದೇವಿ, ಮಹರ್ಷಿಗಳ ಬಳಿಗೆ ತೆರಳೋಣವೇ?

ಅಂಬೆ : [ಆಗಲೆಂದು ಮೌನದಿಂದಲೇ ಸೂಚಿಸುತ್ತಾಳೆ. ಇಬ್ಬರೂ ಅಲ್ಲಿಂದ ತೆರಳುತ್ತಾರೆ.]

ಅಂಕ - ಮೂರು

ದೃಶ್ಯ - 1

[ಭೀಷ್ಮರ ಅರಮನೆಯ ಮೆಟ್ಟಿಲುಗಳ ಬಳಿಗೆ ಸಾರಥಿ ವೀರಸೇನ ಬರುತ್ತಾನೆ. ಭೀಷ್ಮರ ಪರಿಚಾರಕಲ್ಲಿ ಬೊಮ್ಮ ಎಂಬುವನು ಅರಮನೆಯ ಒಳಗಡೆಯಿಂದ ಹೊರಕ್ಕೆ ಬರುತ್ತಾನೆ.]

ಬೊಮ್ಮ : ಏನಣ್ಣ, ಇಷ್ಟು ಬೇಗ ರಥವನ್ನು ಸಿದ್ಧಪಡಿಸಿದೆಯಾ?

ವೀರಸೇನ : ಹೊತ್ತು ಹುಟ್ಟುವ ವೇಳೆಗೆ ರಥವು ಸಿದ್ಧವಾಗಿರಲೆಂದು ನೆನ್ನೆ ಒಡೆಯರು ಆಜ್ಞಾಪಿಸಿದ್ದರು.

ಬೊಮ್ಮ : ಹೌದೇನು! ಒಡೆಯರಿನ್ನೂ ಪೂಜಾಗೃಹದಿಂದ ಹೊರಬಂದಿಲ್ಲ. ಹೊರಡಲು ಇನ್ನೂ ನಿಧಾನವಾಗಬಹುದು. ಬಾರಣ್ಣ ಒಂದು ಗಳಿಗೆ ಇಲ್ಲೇ ಕುಂತ್ಕೋಳೋಣ.

(ವೀರಸೇನ ಮತ್ತು ಬೊಮ್ಮ ಮೆಟ್ಟಿಲುಗಳ ಮೇಲೆ ಕುಳಿತುಕೊಳ್ಳುತ್ತಾರೆ)

ಬೊಮ್ಮ : (ರಹಸ್ಯವಾದ ವಿಷಯವೊಂದನ್ನು ಹೇಳುವ ಉದ್ದೇಶದಿಂದ) ಪರಶುರಾಮರು ಇಷ್ಟೊಂದು ತುರ್ತಾಗಿ ಕರೆಸಿಕೊಳ್ಳುತ್ತಿರುವುದನ್ನು ನೋಡಿದರೆ, ಆ ಹೆಣ್ಣುಗಳದೇ ಕೈವಾಡವಿರಬೇಕೆನ್ನಿಸುತ್ತದೆ.

ವೀರಸೇನ : ಅದರಲ್ಲಿ ಅನುಮಾನವೇನು ಬಂತು. ಹಸ್ತಿನಾಪುರದಲ್ಲೆಲ್ಲಾ ಹಬ್ಬಿರುವ ವಿಷಯವನ್ನು ಕಿವಿಯಲ್ಲಿ ಗುಟ್ಟಾಗಿ ಹೇಳುತ್ತಿದ್ದೀಯಲ್ಲ.

ಬೊಮ್ಮ : ನಮ್ಮ ಒಡೆಯರಿಗೆ ಒಳ್ಳೆಯ ಧರ್ಮಸಂಕಟವೇ ಬಂದಂತಾಯಿತಲ್ಲವೆ?

ವೀರಸೇನ : ಪ್ರಭುಗಳಿಗೆ ಗುರುವಿನ ಬಗ್ಗೆ ಬಹು ಪೂಜ್ಯ ಭಾವನೆಯಿದೆ, ಏನಾಗುವುದೋ ನೋಡಬೇಕು.

ಬೊಮ್ಮ : ಗುರುಗಳ ಮಾತಿಗೆ ಕಟ್ಟುಬಿದ್ದು ಒಂದು ವೇಳೆ ಮದುವೆಯಾಗಿ ಬಿಟ್ಟರೆ!

ವೀರಸೇನ : ನಮ್ಮ ಒಡೆಯರು ಅಷ್ಟು ಸುಲಭವಾಗಿ ಒಪ್ಪÂವಂಥವರಲ್ಲ.

ಬೊಮ್ಮ : ಪರಶುರಾಮರು ಅದೆಷ್ಟೋ ಬಾರಿ ರಾಜರ ಕುಲವನ್ನೇ ಧ್ವಂಸ ಮಾಡಿದ್ದಾರಂತೆ! ನಿಜವೇನಣ್ಣ.

ವೀರಸೇನ : ಹೌದಪ್ಪ, ಇಪ್ಪತ್ತೊಂದು ಬಾರಿ ಜಗತ್ತನ್ನೇ ನಡುಗಿಸಿದ್ದಾರೆ.

ಬೊಮ್ಮ : ಅಂದ ಮೇಲೆ ಅಂಥವರ ಮುಂದೆ ನಮ್ಮೊಡೆಯರ ಗತಿ ಏನಾಗುವುದೋ?

ವೀರಸೇನ : ನಮ್ಮೊಡೆಯರನ್ನು ಏನೆಂದು ತಿಳಿದಿರುವೆ?

ಬೊಮ್ಮ : ಹಾಗಲ್ಲ. ನಮ್ಮ ಪ್ರಭುಗಳು ಅವರ ಮಾತಿಗೆ ಒಪ್ಪದಿದ್ದು, ಆಗ ಅವರು "ಇವನೂ ಕ್ಷತ್ರಿಯನಲ್ಲವೇ" ಎಂದು ಮೊದಲಿನಂತೆ ಕೋಪಿಷ್ಠರಾಗಿ ಪ್ರಭುಗಳ ಮೇಲೆ ಎರಗಿದರೆ!

ವೀರಸೇನ : (ಮುಗುಳ್ನಗುತ್ತಾ)

ನಿನ್ನಂತೆ ಹೇಡಿಗಳೆಂದು ಭಾವಿಸಿದ್ದೀಯಾ, ನಮ್ಮ ಪ್ರಭುಗಳನ್ನು. ಧರ್ಮಕ್ಕೆ ತಲೆಬಾಗುವರೆ ವಿನಹ, ಪರಾಕ್ರಮಕ್ಕೆ ಜಗ್ಗುವರಲ್ಲ.

ಬೊಮ್ಮ : ಗುರುವೇ ತಿರುಗಿಬಿದ್ದಾಗ!

ವೀರಸೇನ : ಅವರನ್ನೂ ಎದುರಿಸುತ್ತಾರೆ.

ಬೊಮ್ಮ : ಅದು ಸಾಧ್ಯವೇನಣ್ಣ?
(ಅಷ್ಟರಲ್ಲಿ ಒಳಗಡೆಯಿಂದ ಸೇವಕನೊಬ್ಬನು ಬೊಮ್ಮನನ್ನು ಅರಸುತ್ತಾ ಬಂದು)

ಸೇವಕ : ಬೊಮ್ಮ... ಬೊಮ್ಮ... ಕಾಡು ಹರಟೆ ಹೊಡೆಯುತ್ತಾ ಕುಳಿತಿದ್ದೀಯಾ? ಬೇಗ ಬಾ, ಪ್ರಭುಗಳು ಕರೆಯುತ್ತಿದ್ದಾರೆ.

ಬೊಮ್ಮ : (ಬಹಳ ಗಾಬರಿಯಿಂದ)

ಬಂದೆ, ಬಂದೆ... ಇದೋ ಬಂದೆ.
(ಎಂದು ಬಡಬಡಿಸುತ್ತಾ ಆತುರಾತುರವಾಗಿ ಒಳಕ್ಕೆ ಓಡುತ್ತಾನೆ. ಅವನು ಓಡುವ ರೀತಿಯನ್ನು ಕಂಡು ವೀರಸೇನನು ನಗುತ್ತ, ರಥದ ಬಳಿಗೆ ತೆರಳುತ್ತಾನೆ.)

ದೃಶ್ಯ-2

[ಯಮುನಾ ನದಿ ತೀರದಲ್ಲಿನ ಆಶ್ರಮ. ಪಕ್ಕದಲ್ಲಿನ ಬೆಟ್ಟ ಗುಡ್ಡಗಳ ಸಾಲು ಆಶ್ರಮದ ಪ್ರಶಾಂತ ವಾತಾವರಣಕ್ಕೆ ಮನಮೋಹಕವಾದ ಹಿನ್ನೆಲೆಯನ್ನು ಕಲ್ಪಿಸಿದೆ. ನಾನಾ ಬಗೆಯ ವರ್ಣರಂಜಿತ ಪುಷ್ಪಗಳ ಕಂಪು ಎಲ್ಲೆಡೆಯಲ್ಲೂ ಹಬ್ಬಿದೆ. ಜಿಂಕೆ, ಮೊಲ ಮುಂತಾದ ಸಾಧು ಪ್ರಾಣಿಗಳು ಅತ್ತಿತ್ತ ನೆಗೆದಾಡುತ್ತಿವೆ. ಅರಳಿಕಟ್ಟೆಯ ಪೀಠವೊಂದರ ಮೇಲೆ ಪರಶುರಾಮ ಮಹರ್ಷಿ ದೀರ್ಘವಾದ ಆಲೋಚನಾಭಂಗಿಯಲ್ಲಿ ಕುಳಿತಿದ್ದಾರೆ. ಅವರ ಎಡಭಾಗದಲ್ಲಿ ಕಟ್ಟೆಯ ಕೆಳಗೆ ಅಂಬೆ ಮತ್ತು ಮಾಲಿನಿಯರು ತಲೆಬಾಗಿಸಿ ಕುಳಿತಿದ್ದಾರೆ. ಅಷ್ಟರಲ್ಲಿ ಒಬ್ಬ ಶಿಷ್ಯ ಓಡಿ ಬಂದು, ಗುರುಗಳಿಗೆ ನಮಿಸಿ]

ಶಿಷ್ಯ : ಹಸ್ತಿನಾಪುರದಿಂದ ಇದೀಗ ತಾನೆ ಬಂದಿರುವ ಭೀಷ್ಮರು ತಮ್ಮ ಅಪ್ಪಣೆಗಾಗಿ ಕಾಯುತ್ತಿದ್ದಾರೆ, ಗುರುವರ್ಯ.

ಪರಶುರಾಮ : ಅವರನ್ನು ಆಶ್ರಮದ ಮರ್ಯಾದೆಗನುಗುಣವಾಗಿ ಆಹ್ವಾನಿಸಿ ಕರೆ ತನ್ನಿ.

ಶಿಷ್ಯ : ಆಗಲಿ ಪೂಜ್ಯರೆ.

[ವಂದಿಸಿ ತೆರಳುತ್ತಾನೆ. ಭೀಷ್ಮರ ಆಗಮನ ವಾರ್ತೆಯನ್ನರಿತ ಪರಶುರಾಮರು ಅಂಬೆ ಮತ್ತು ಮಾಲಿನಿಯರಿಗೆ ಎಲೆವನೆಯೊಳಕ್ಕೆ ಹೋಗಲು ಸೂಚಿಸುತ್ತಾರೆ. ಅವರಿಬ್ಬರು ಪಕ್ಕದಲ್ಲೆ ಇದ್ದ ಎಲೆವನೆಯೊಳಕ್ಕೆ ಹೋಗುತ್ತಾರೆ. ಪರಶುರಾಮರು ತಮ್ಮ ಪಾಡಿಗೆ ತಾವು ಮತ್ತೆ ಆಲೋಚನಾಮಗ್ನರಾಗಿರುತ್ತಾರೆ. ಭೀಷ್ಮರು ಆಗಮಿಸುತ್ತಾರೆ.]

ಭೀಷ್ಮ : ಪೂಜ್ಯರಿಗೆ ನಮಸ್ಕಾರ.

[ದೀರ್ಘದಂಡ ಪ್ರಣಾಮಗೈಯುತ್ತಾನೆ]

ಪರಶುರಾಮ : ಇತ್ತ ಬಾ ಭೀಷ್ಮ. ಕ್ಷೇಮದಿಂದಿರುವೆಯಾ?

ಭೀಷ್ಮ : ತಮ್ಮ ಆಶೀರ್ವಾದಬಲದಿಂದ ಚೆನ್ನಾಗಿದ್ದೇನೆ.

ಪರಶುರಾಮ : ರಾಜಕಾರಣದಲ್ಲಿ ಎಲ್ಲವೂ ಸುಗಮವಾಗಿರುವುದೇ?

ಭೀಷ್ಮ : ತಮಗೆ ತಿಳಿಯದೇ ಇರುವುದು ಯಾವುದು ಗುರುದೇವ? ರಾಜಕಾರಣದಲ್ಲಿ

ಸುಗಮವನ್ನರಸುವುದು ಬಿಸಿಲ್ಗುದುರೆಯನ್ನು ಹಿಡಿಯಲೆತ್ನಿಸಿದಂತೆ.

ಪರಶುರಾಮ : ಶಂತನು ಅಳಿದ ಮೇಲೆ ರಾಜ್ಯದ ಹೊಣೆಯಲ್ಲ ನಿನ್ನ ಮೇಲೆ ಬಿದ್ದಿದೆಯೆಂದು ಕೇಳಿ ತಿಳಿದಿದ್ದೇನೆ.

ಭೀಷ್ಮ : ನನಗಿಂತಲೂ ಹೆಚ್ಚಾಗಿ ರಾಜಮಾತೆಯವರೇ ಹೊತ್ತಿದ್ದಾರೆ.

ಪರಶುರಾಮ : ಸತ್ಯವತಿಯ ಮಗನೊಬ್ಬ ಸಾವಿಗೀಡಾದನಲ್ಲವೇ?

ಭೀಷ್ಮ : ಹೌದು ಗುರುದೇವ, ಚಿತ್ರಾಂಗದನೆಂಬ ಹಿರಿಯ ಮಗನು ಅಕಾಲ ಮರಣಕ್ಕೀಡಾದನು.

ಪರಶುರಾಮ : ಮರಣಕ್ಕೆ ಕಾರಣವೇನು?

ಭೀಷ್ಮ : ಬೇಟೆಗೆಂದು ಕಾಡಿಗೆ ಹೋಗಿದ್ದಾಗ, ಕ್ರೂರ ವ್ಯಾಘ್ರವೊಂದರ ಕೈಗೆ ಸಿಕ್ಕಿ ಸಾವನ್ನಪ್ಪಿದ... ಆದರೆ ರಾಜಕುಮಾರನ ಸಾವಿಗೆ ಅದ್ಭುತ ಕಾರಣವೊಂದನ್ನು ಕಟ್ಟಿ ಬಣ್ಣಿಸಿತು, ಈ ಜಗತ್ತು.

ಪರಶುರಾಮ : ಏನೆಂದು?

ಭೀಷ್ಮ : ಕಾಡಿನಲ್ಲಿ ವಿಹರಿಸುತ್ತಿದ್ದ ಗಂಧರ್ವರನ್ನು ವಿನಾಕಾರಣವಾಗಿ ಚಿತ್ರಾಂಗದ ಕೆಣಕಿದನೆಂದೂ, ಅದರಿಂದ ರೋಷಗೊಂಡ ಗಂಧರ್ವರು ಹುಲಿಯ ರೂಪದಲ್ಲಿ ಮುತ್ತಿ ಕೊಂದರೆಂದು.

ಪರಶುರಾಮ : ಲೋಕದ ಬಾಯನ್ನು ಕಟ್ಟಲು ಯಾರಿಗೆ ತಾನೆ ಸಾಧ್ಯ?

ಭೀಷ್ಮ : [ಮುಗುಳ್ನಕ್ಕು ಸುಮ್ಮನಾಗುತ್ತಾನೆ]

ಪರಶುರಾಮ : ವಿಚಿತ್ರವೀರ್ಯನ ಲಗ್ನವಾಯಿತೆಂದು ಕೇಳಿದೆನು.

ಭೀಷ್ಮ : ಹೌದು ಗುರುವರ್ಯ, ಕಾಶೀರಾಜ ಪುತ್ರಿಯರೊಡನೆ ನೆರವೇರಿತು.

ಪರಶುರಾಮ : ಲಗ್ನಕ್ಕೆ ನಿನ್ನ ಪರಾಕ್ರಮವೇ ನಿಮಿತ್ತವಾಯಿತಂತೆ.

ಭೀಷ್ಮ : ಹಸ್ತಿನಾಪುರದ ಅರಸರನ್ನು ಕಾಶೀರಾಜನು ಉಪೇಕ್ಷೆ ಮಾಡಿದ್ದು ಸ್ವಲ್ಪ ಮಟ್ಟಿನ

ಘರ್ಷಣೆಗೆ ಕಾರಣವಾಯಿತು.

ಪರಶುರಾಮ : ಭೀಷ್ಮ, ನಮ್ಮಲ್ಲಿರುವ ಶಕ್ತಿಯನ್ನು ಲೋಕದ ಒಳಿತಿಗಾಗಿ ವಿನಿಯೋಗಿಸಬೇಕಲ್ಲವೇ?

ಭೀಷ್ಮ : ಹೌದು ಗುರುದೇವ.

ಪರಶುರಾಮ : ವಿನಾಶಾತ್ಮಕವಾದ ಕಾರ್ಯಗಳಿಗೆ ನಮ್ಮ ಶಕ್ತಿಯನ್ನು ಬಳಸುವುದು ಪಾಪಕರವಲ್ಲವೇ?

ಭೀಷ್ಮ : ಲೌಕಿಕ ಬಾಳ್ವೆಯ ಅಗತ್ಯಕ್ಕಾಗಿ ಕೆಲವೊಮ್ಮೆ ನಾವು ಪಾಪಪುಣ್ಯಗಳ ಗೆರೆಯನ್ನು ದಾಟಬೇಕಾಗುತ್ತದೆ, ಗುರುದೇವ.

ಪರಶುರಾಮ : ಅಂದರೆ ಇಚ್ಛಾಸಾಧನೆಗಾಗಿ ಏನನ್ನು ಬೇಕಾದರೂ ಮಾಡಬಹುದೆಂದು ನಿನ್ನ ಅಭಿಪ್ರಾಯವೇನು?

ಭೀಷ್ಮ : ಹಾಗಲ್ಲ ಗುರುವರ್ಯ. ಕಾಶೀರಾಜನಿಂದ ನಮ್ಮ ಅರಸನಿಗೆ ಆಗಿದ್ದ ಮುಖಭಂಗಕ್ಕೆ ತಕ್ಕ ಪ್ರತೀಕಾರವನ್ನು ಮಾಡಲೇಬೇಕಿತ್ತು.

ಪರಶುರಾಮ : ಹಾಗಿದ್ದರೆ ಕಾಶೀರಾಜ ಮಾಡಿದ ತಪ್ಪಿಗೆ ಅವನೊಡನೆ ನೀನು ಹೋರಾಡಬೇಕಿತ್ತೇ ಹೊರತು, ಅವನ ಮಕ್ಕಳನ್ನೇಕೆ ಅಪಹರಿಸಿದೆ? ಅಬಲೆಯರ ಮೇಲೆ ಕೈ ಮಾಡಬಾರದೆಂಬ ವಿವೇಕವು ನಿನ್ನಿಂದ ದೂರವಾಗಿತ್ತೆ?

ಭೀಷ್ಮ : ನಮ್ಮ ರಾಜವಂಶದ ಕುಡಿಯನ್ನು ಬೆಳಗಿಸಬೇಕೆಂಬ ಉದ್ದೇಶದಿಂದ ಅವರನ್ನು ಕೊಂಡೊಯ್ದು ಬಂದನೇ ವಿನಹ, ಮತ್ತಾವ ಹೀನದೃಷ್ಟಿಯಿಂದಲ್ಲ.

ಪರಶುರಾಮ : ನಿನ್ನ ಉದ್ದೇಶ ನೆರವೇರಿತೆ?

ಭೀಷ್ಮ : ಬಹುಮಟ್ಟಿಗೆ ಈಡೇರಿದಂತಾಗಿದೆ.

ಪರಶುರಾಮ : ಮದುವೆಯಾಗದೆ ಉಳಿದಿರುವ ಅಂಬೆಯ ಭವಿಷ್ಯವೇನು?

ಭೀಷ್ಮ : (ಮೌನದಿಂದಿರುತ್ತಾನೆ.)

ಪರಶುರಾಮ : ಅನಿರೀಕ್ಷಿತವಾದ ನಿನ್ನ ಆಕ್ರಮಣದಿಂದ ಅವಳ ಬಾಳೇ ಮುರಿದು ಬೀಳುವ ಸ್ಥಿತಿಗೆ ಬಂದಿದೆಯಲ್ಲವೇ? ಅದನ್ನು ಈಗ ಹೇಗೆ ಸರಿಪಡಿಸುತ್ತೀಯೆ?

ಭೀಷ : ನನ್ನ ಸಲಹೆಗೆ ಆಕೆ ಒಪ್ಪಿದರೆ, ಈಗಲೂ ಕಾಲ ಮಿಂಚಿಲ್ಲ ಗುರುದೇವ.

ಪರಶುರಾಮ : ನಿನ್ನನ್ನಲ್ಲದೇ, ವಿಚಿತ್ರವೀರ್ಯನನ್ನಾಗಲಿ, ಸಾಲ್ವಲನನ್ನಾಗಲಿ ಅಥವಾ ಮತ್ತಾವ ಗಂಡುಗಳನ್ನಾಗಲಿ ವರಿಸುವುದಿಲ್ಲವೆಂದು ಆಕೆ ನಿರ್ಧರಿಸಿದ್ದಾಳಲ್ಲ.

ಭೀಷ್ಮ : ಜಗತ್ತಿನ ಹೆಣ್ಣುಗಳನ್ನೆಲ್ಲಾ ತಾಯಂದಿರೆಂದು ನಾನು ನಿರ್ಧರಿಸಿದ್ದೇನಲ್ಲ.

ಪರಶುರಾಮ : ಆದರೆ ನಿನ್ನ ನಿರ್ಧಾರ ಲೌಕಿಕ ಧರ್ಮಕ್ಕೆ ವಿರುದ್ಧವಲ್ಲವೇ ಭೀಷ್ಮ?

ಭೀಷ್ಮ : ಹೇಗೆ ಗುರುವರ್ಯ?

ಪರಶುರಾಮ : ಬಾಳು ಅರ್ಥ ಪೂರ್ಣವಾಗಬೇಕಾದರೆ ಗೃಹಸ್ಥಧರ್ಮವನ್ನು ಸ್ವೀಕರಿಸಬೇಕಲ್ಲವೇ?

ಭೀಷ್ಮ : (ಸ್ವಲ್ಪ ಹಿಂಜರಿಯುತ್ತಾ)
ತಾವು ಗೃಹಸ್ಥಧರ್ಮಕ್ಕೆ ಸಿಲುಕಿದ್ದಿರಾ ಗುರುವರ್ಯ?

ಪರಶುರಾಮ : ನಾನಾದರೋ ಲೋಕದ ಸಮಸ್ತ ಆಕರ್ಷಣೆಗಳಿಂದ ದೂರನಾಗಿ, ಕಾಡಿನಲ್ಲಿ ಗೆಡ್ಡೆ ಗೆಣಸುಗಳನ್ನು ಆಶ್ರಯಿಸಿ, ಬಾಳುತ್ತಿರುವ ವ್ಯಕ್ತಿ. ನೀನು ಲೌಕಿಕದ ವೃತ್ತದಲ್ಲಿ ಬಾಳುತ್ತಿರುವ ರಾಜಕುವರ. ಲೋಕ ಸುಖದ ಎಲ್ಲಾ ವಸ್ತುಗಳನ್ನು ಅನುಭವಿಸುತ್ತಿದ್ದು, ಹೆಣ್ಣನ್ನು ಮಾತ್ರ ಬೇಡವೆಂದು ದೂರಮಾಡುವುದು ಸರಿಯೇ?

ಭೀಷ್ಮ : (ಮೌನದಿಂದಿರುತ್ತಾನೆ.)

ಪರಶುರಾಮ : ರಾಜ್ಯವೊಂದರ ಆಡಳಿತಸೂತ್ರವನ್ನು ಹಿಡಿದಿರುವೆ. ನೀನು ಹುಟ್ಟಿರುವ ರಾಜವಂಶದ ಉದ್ಧಾರಮಾಡಬೇಕೆಂಬ ಮಹತ್ವವಾದ ಆಸೆಯನ್ನು ಅಂತರಂಗದಲ್ಲಿ ಹೊತ್ತಿರುವೆ. ಇಂತಹ ಲೌಕಿಕದ ಬಯಕೆಗಳಿಂದ ಕೂಡಿರುವ ನೀನು ಹೆಣ್ಣಿಗೂ ಸ್ಥಾನವನ್ನೇಕೆ ಕೊಡಬಾರದು?... ಭೀಷ್ಮ, ಯೋಚಿಸಿನೋಡು.

ಭೀಷ್ಮ : ಗುರುವರ್ಯ, ತಾವು ಹೇಳಿದಂತೆ ನಾನು ಲೌಕಿಕದ ವೃತ್ತದಲ್ಲಿ

ಪರಿಭ್ರಮಿಸುತ್ತಿರುವುದೇನೊ ದಿಟ. ಆದರೆ ಅದು ನನಗಾಗಿಯಲ್ಲ. ನನ್ನ ವಂಶಜರ ಹಿತಕ್ಕಾಗಿ.

ಪರಶುರಾಮ : ನಿನ್ನ ವಂಶಜರ ಹಿತಕ್ಕಾಗಿಯೇ ನೀನೇಕೆ ಗೃಹಸ್ಥನಾಗಬಾರದು?

ಭೀಷ್ಮ : ಅದು ಈ ಜನ್ಮದಲ್ಲಿ ಸಾಧ್ಯವೇ ಗುರುದೇವ? ನಾನಿತ್ತಿರುವ ಭಾಷೆಗೆ ತಪ್ಪಿ ನಡೆಯಲೇ?

ಪರಶುರಾಮ : ಸಮಸ್ಯೆಗಳು ಉದ್ಭವಿಸಿದಾಗ ಉದ್ರೇಕದಿಂದ ವರ್ತಿಸುವ ನಾವು, ಎಲ್ಲಾ ಸಮಯದಲ್ಲೂ ಅದೇ ರೀತಿ ಇರಬೇಕೆನ್ನುವೆಯಾ?

ಭೀಷ್ಮ : (ಮೌನದಿಂದಿರುತ್ತಾನೆ.)

ಪರಶುರಾಮ : ನನ್ನ ಬಾಳನ್ನೇ ನೋಡು ಭೀಷ್ಮ. ಯಾವುದೋ ಒಂದು ಆವೇಶಕ್ಕೆ ಸಿಲುಕಿ ಕ್ರೋಧಗೊಂಡು ಕ್ಷತ್ರಿಯರ ಮೇಲೆ ವಿಷಕಾರುತ್ತಿದ್ದೆ. ಕಾಲ ಉರುಳಿದಂತೆಲ್ಲಾ ನನ್ನೊಳಗಿದ್ದ ಆ ಕ್ರೋಧಸಾಧನೆಯ ಕಾವು ಆರಿ, ಈಗ ನಾನು ಆ ದ್ವೇಷವನ್ನೇ ಸಂಪೂರ್ಣವಾಗಿ ಮರೆತಿಲ್ಲವೇ? ಯಾವುದೇ ಒಂದನ್ನು ಪಟ್ಟುಹಿಡಿದು ನಾವು ವರ್ತಿಸಬಾರದು. ಸಂದರ್ಭಕ್ಕೆ ಹೊಂದಿಕೊಂಡು ಜಗತ್ತಿನಲ್ಲಿ ಬಾಳಬೇಕು. ವಿಶಾಲದೃಷ್ಟಿಯಿಂದ ಚಿಂತನೆಮಾಡಿ ನೋಡು, ಭೀಷ್ಮ. ಅಂಬೆಯ ಕೈ ಹಿಡಿಯುವುದರಿಂದ ನಿನ್ನ ಬಾಳಿಗೆ ಯಾವ ವಿಧವಾದ ಹಾನಿಯುಂಟಾಗದು. ನೊಂದ ಜೀವಿಯೊಂದನ್ನು ಉದ್ಧಾರಮಾಡಿದ ಪುಣ್ಯ ನಿನ್ನದಾಗುತ್ತದೆ.

ಭೀಷ್ಮ : ನನ್ನ ಹಿರಿಯರಿಗೆ ದ್ರೋಹ ಮಾಡಲೇನು?

ಪರಶುರಾಮ : ಭೀಷ್ಮ, ಅಂದು ನೀನು ಯಾವ ಉದ್ದೇಶಕ್ಕಾಗಿ ಪ್ರತಿಜ್ಞೆ ಮಾಡಿದ್ದೆಯೋ, ಅದು ಈಗಾಗಲೇ ಫಲ ನೀಡಿದೆ. ಶಂತನು ಸತ್ಯವತಿ ಕೂಡಿ ಬಾಳಿದ್ದಾರೆ. ಅವರ ಬಾಳಿನ ಕುಡಿಯಾಗಿ ವಿಚಿತ್ರವೀರ್ಯ ಅಭಿವೃದ್ಧಿಗಾಗಿ ಬರುತ್ತಿದ್ದಾನೆ. ಆತನಿಗೆ ಪಟ್ಟವನ್ನೂ ಕಟ್ಟಿದ್ದೀಯೆ. ತನ್ನ ಕಾಲ ಮೇಲೆ ನಿಂತು ಆತ ಪ್ರಭುತ್ವ ಮಾಡಲಿ. ನೀನು ಅಂಬೆಯನ್ನು ಮದುವೆಯಾಗಿ, ನಿನ್ನ ಭುಜಬಲದಿಂದ ಹೊಸ ರಾಜ್ಯವೊಂದನ್ನು ಕಟ್ಟಿ ಆಳುವವನಾಗು. ಪ್ರಪಂಚ ವಿಸ್ತಾರವಾಗಿದೆ, ಭೀಷ್ಮ. ಎಲ್ಲಾದರೂ ಹೋಗಿ ಲೋಕದ ಸಮಸ್ತ ಸುಖಗಳನ್ನು ಧರ್ಮನಿಷ್ಠನಾಗಿ ಅನುಭವಿಸು.

ಭೀಷ್ಮ : ಲೋಕದ ಹೆಣ್ಣುಗಳೊಡನೆ, ರಾಜ್ಯಲಕ್ಷ್ಮಿಯನ್ನೂ ನಿರಾಕರಿಸಿದ್ದೇನೆ, ಗುರುವರ್ಯ.

ಪರಶುರಾಮ : (ಸ್ವಲ್ಪ ಬೇಸರದ ಧ್ವನಿಯಿಂದ)

ಹೆಣ್ಣಿನ ಆಸೆಯಿಲ್ಲ; ಮಣ್ಣಿನ ಬಯಕೆಯಿಲ್ಲ. ಹಾಗಾದರೆ ನೀನೇಕೆ ಅರಮನೆಯಲ್ಲಿರುವೆ? ಇನ್ನುಳಿದ ಅಲ್ಪ ಸ್ವಲ್ಪ ಬಂಧನವನ್ನು ಕಿತ್ತೊಗೆದು ಕಾಡಿಗೇಕೆ ಬರಬಾರದು?

ಭೀಷ್ಮ : ಅದು ಪಲಾಯನವಾಗುವುದಿಲ್ಲವೇ ಗುರುದೇವ?

ಪರಶುರಾಮ : ಹೇಗೆ?

ಭೀಷ್ಮ : ನನ್ನ ಪಾಲಿಗೆ ಅವುಗಳ ಸಂಗಸುಖ ದೊರೆಯದಂತಾಗಿದೆ ಎಂಬ ಒಂದೇ ಕಾರಣಕ್ಕಾಗಿ ಕಾಡನ್ನು ಹೊಕ್ಕರೆ, ನನ್ನ ಮನಸ್ಸಿಗೆ ನಾನೇ ವಂಚನೆ ಮಾಡಿಕೊಂಡಂತಾಗುವುದಿಲ್ಲವೇ? ಮಾಡಬೇಕಾದ ಅನೇಕ ಕಾರ್ಯಗಳನ್ನು ಕೈಬಿಟ್ಟು ಬಂದರೆ, ಕರ್ತವ್ಯ ವಿಮುಖನಾದವನ ದೋಷ ನನಗೆ ತಟ್ಟುವುದಿಲ್ಲವೇ?

ಪರಶುರಾಮ : ಹಾಗಾದರೆ ನಿನ್ನ ಬಾಳಿನ ಗುರಿಯೇನು?

ಭೀಷ್ಮ : (ಸ್ವಲ್ಪ ಕಾಲ ಮೌನದಿಂದಿದ್ದು)
ಅಧ್ಯಯನ ಕಾಲದಲ್ಲಿ ತಮ್ಮಿಂದ ಗುರುವಾಣಿಯೊಂದನ್ನು ನಾನು ಕೇಳಿದ್ದೆನು.

ಪರಶುರಾಮ : ಏನೆಂದು?

ಭೀಷ್ಮ : ಜೀವನದ ಸಾರ್ಥಕತೆಗೆ ಎರಡು ಮಾರ್ಗಗಳಿವೆ. ಪರಿಶುದ್ಧ ಚಿತ್ತದಿಂದ ಪಡೆಯುವ ಜ್ಞಾನ ಸಾಧನೆಯೊಂದಾದರೆ, ನಿಷ್ಕಾಮಭಾವದಿಂದ ಮಾಡುವ ಕರ್ತವ್ಯಸಾಧನೆ ಮತ್ತೊಂದು.

ಪರಶುರಾಮ : (ಭೀಷ್ಮರನ್ನೇ ಅವಲೋಕಿಸುತ್ತಿರುತ್ತಾರೆ.)

ಭೀಷ್ಮ : ನೀವು ಮಹಾ ತಪಸ್ವಿಗಳಾಗಿ ಜ್ಞಾನಸಾಧನೆಯ ಮಾರ್ಗದಲ್ಲಿ ಸಾಗುತ್ತಿದ್ದೀರಿ. ನಾನು ಕರ್ಮಯೋಗದಿಂದ ಬಾಳನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ತೀರ್ಮಾನಿಸಿದ್ದೇನೆ. ಅಂದು ನೀವು ತೋರಿದ ಬೆಳಕಿನ ದಾರಿಯಲ್ಲೇ ನಡೆಯಲು

ಪ್ರಯತ್ನಿಸುತ್ತಿದ್ದೇನೆ.

ಪರಶುರಾಮ : (ಮನಸ್ಸು ತುಂಬಿ ಬಂದಂಥಾಗಿ)
ಭೀಷ್ಮ.

ಭೀಷ್ಮ : ನನ್ನ ನಿರ್ಧಾರದಲ್ಲಿ ಎಡವದಂಥ ಮನೋಸ್ಥೈರ್ಯವನ್ನು ನನಗೆ ಅನುಗ್ರಹಿಸಿ, ಗುರುವರ್ಯ.

ಪರಶುರಾಮ : ನಿನ್ನ ಬಾಳಿನ ಉದ್ದೇಶಕ್ಕೆ ಅಡ್ಡಲಾಗಿ ಬರುವ ಇಚ್ಛೆ ನನಗಿಲ್ಲ. ಆದರೆ ಅಂಬೆಯ ಬಾಳು ಹೀಗಾಯಿತಲ್ಲ ಎಂಬ ವ್ಯಥೆಯಿಂದ ನಿನ್ನೊಡನೆ ಇಷ್ಟೊಂದು ಮಾತನಾಡಬೇಕಾಯಿತು.

(ದೀರ್ಘವಾಗಿ ನಿಟ್ಟುಸಿರನ್ನು ಬಿಡುತ್ತಾರೆ. ಅನಂತರ ಅಲ್ಲಿದ್ದ ಶಿಷ್ಯನೊಬ್ಬನಿಗೆ ಅಂಬೆಯನ್ನು ಕರೆಯುವಂತೆ ಸೂಚಿಸುತ್ತಾರೆ. ಆ ಶಿಷ್ಯನ ಸೂಚನೆಯ ಮೇರೆಗೆ ಅಂಬೆಯು ಮಾಲಿನಿಯ ಜೊತೆಗೂಡಿ ಬಂದು ನಿಲ್ಲುತ್ತಾಳೆ.)

ಪರಶುರಾಮ : ಅಂಬೆ, ನಿನ್ನ ಉದ್ದೇಶ ಕೈಗೂಡುವಂತೆ ಕಂಡುಬರುತ್ತಿಲ್ಲ. ಭೀಷ್ಮ ತನ್ನ ಹಠವನ್ನೇ ಮುಂದೊಡ್ಡುತ್ತಿದ್ದಾನೆ.

ಭೀಷ್ಮ : ಇದು ಹಠವಲ್ಲ ಗುರುವರ್ಯ. ನನ್ನ ಜೀವನದ ಪ್ರಮುಖ ನಿರ್ಧಾರ.

ಅಂಬೆ : ಹೆಣ್ಣುಮಕ್ಕಳ ಬಾಳನ್ನು ಹಾಳುಮಾಡುವುದು ನಿಮ್ಮ ಜೀವನದ ಪ್ರಮುಖ ಉದ್ದೇಶವೇನು?

ಭೀಷ್ಮ : ಅಂಬೆ, ಮತ್ತೆ ಮತ್ತೆ ಆಡಿದ ಮಾತುಗಳನ್ನೇ ಆಡಬೇಡ.

ಅಂಬೆ : ಮತ್ತಾವ ಮಾತುಗಳನ್ನಾಡಲಿ. ಅಬಲೆಯರ ಮೇಲೆ ಆಕ್ರಮಣ ಮಾಡುವ ನಿಮ್ಮ ಪರಾಕ್ರಮವನ್ನು ಕೊಂಡಾಡಲೇನು? ವಿಚಿತ್ರವೀರ್ಯ ರಾಜಕುಮಾರನ ಕೀರ್ತಿಪತಾಕೆಯನ್ನೇರಿಸಲು ನೀವು ಮಾಡುತ್ತಿರುವ ಸಾಹಸಗಳನ್ನು ಕುರಿತು ಸ್ತುತಿಸಲೇನು? ಅನ್ಯರ ಬಾಳನ್ನು ತೃಣಕ್ಕಿಂತ ಕಡೆಯಾಗಿ ಕಾಣುತ್ತಿರುವ ನಿಮ್ಮ ಯೌವನದ ಮದವನ್ನು ಬಣ್ಣಿಸಲೇನು?

ಭೀಷ್ಮ : ಅಂಬೆ, ರಾಜಕುಮಾರಿಯಾದ ನೀನು, ನಿನ್ನ ಘನತೆಗೆ ತಕ್ಕುದಲ್ಲದ

ನುಡಿಗಳನ್ನಾಡುತ್ತಿರುವೆ.

ಅಂಬೆ : ನಾನಿಂದು ರಾಜಕುಮಾರಿಯಲ್ಲ, ಭೀಷ್ಮ. ನಿಮ್ಮ ಪ್ರತಾಪದ ಕಿಚ್ಚಿಗೆ ಬಲಿಯಾಗಿ ಬೇಯುತ್ತಿರುವ ಹೆಣ್ಣು. ಗಂಡಿನ ಬಾಹುಬಲದ ಮುಂದೆ ಜರ್ಜರಿತಳಾಗಿರುವ ಅಬಲೆ. ನಿಮ್ಮಂತೆ ನನ್ನಲ್ಲಿ ತೋಳ್ಬಲವಿದ್ದಿದ್ದರೆ ಅದರ ಪಾಡೇ ಬೇರಾಗುತ್ತಿತ್ತು. ಹೆಣ್ಣಾದ ನಾನು, ನನ್ನ ದೈಹಿಕ ನಿರ್ಬಲತೆಗಾಗಿ ದುಃಖಿಸುತ್ತಿದ್ದೇನೆ. ನಿಮ್ಮಂಥ ಸೊಕ್ಕಿನ ಗಂಡಸರನ್ನು ಸದೆಬಡಿದು, ನನ್ನ ಬಾಳನ್ನು ರೂಪಿಸಿಕೊಳ್ಳುವಂಥ ಶಕ್ತಿ ನನ್ನಲ್ಲಿಲ್ಲವಲ್ಲ ಎಂಬ ನಿಸ್ಸಹಾಯಕತೆಯಿಂದ ನನಗೆ ನನ್ನ ಬಗ್ಗೆಯೇ ಕ್ರೋಧ ಉರಿದೇಳುತ್ತಿದೆ. ನನಗೆ ನೀವಲ್ಲ ಅನ್ಯಾಯ ಮಾಡಿದ್ದು; ಪ್ರಕೃತಿಯೇ ಅನ್ಯಾಯ ಮಾಡಿದೆ. ಗಂಡು ಸಬಲ; ಹೆಣ್ಣು ಅಬಲೆ ಎಂಬ ಈ ಸೊಲ್ಲು ಅಡಗುವ ತನಕ, ನಿಮ್ಮಂಥ ಗಂಡುಗಳ ದಬ್ಬಾಳಿಕೆ ಮತ್ತು ನನ್ನಂಥ ಹೆಣ್ಣುಗಳ ಸಂಕಟ ಈ ಜಗತ್ತಿನಲ್ಲಿ ಇದ್ದೇ ಇರುತ್ತದೆ...

(ಮಾತನಾಡುತ್ತಿರುವಂತೆಯೇ ತೀವ್ರ ಉದ್ರೇಕಕ್ಕೆ ಒಳಗಾಗುತ್ತಿರುತ್ತಾಳೆ.)

ಪರಶುರಾಮ : ಅಂಬೆ, ಶಾಂತಳಾಗು, ಶಾಂತಳಾಗು.

ಅಂಬೆ : ಗುರುದೇವ, ಹೆಣ್ಣಿನ ಬದುಕಿಗೆ ಬೆಲೆಯೇ ಇಲ್ಲವೇ? ಆಕೆ ಗಂಡಿನ ತೊತ್ತಾಗಿಯೇ ಬಾಳಬೇಕೆ? ಗಂಡಿನ ಇಷ್ಟಾನಿಷ್ಟಗಳಿಗೆ ತಲೆಯೊಡ್ಡಿ ತೊಳಲಾಡುವ ಅಲ್ಪಜೀವಿಯಾಗಿ ಬಾಳಿ ಅಳಿಯಬೇಕೆ? ಹೇಳಿ ಗುರುವರ್ಯ. ಮೃಗದಂತೆ ವರ್ತಿಸುವ ಗಂಡಿನ ಕ್ರೌರ್ಯದಿಂದ ಹೆಣ್ಣು ಪಾರಾಗಿ ಬದುಕಲು ಸಾಧ್ಯವಿಲ್ಲವೇ?

ಪರಶುರಾಮ : ನಿನ್ನ ಪ್ರಶ್ನೆಗೆ ಪ್ರಕೃತಿಯೇ ಉತ್ತರ ನೀಡಬೇಕು, ಅಂಬೆ...

(ಕೆಲ ಕ್ಷಣ ಮೌನದಿಂದಿದ್ದು ಮತ್ತೆ ಮಾತನ್ನು ಮುಂದುವರಿಸುತ್ತಾರೆ)

ಪ್ರಕೃತಿಯಲ್ಲಿ ಎಲ್ಲವೂ ಸಮನಾಗಿಲ್ಲ. ಬಹುಬಗೆಯ ವಸ್ತು ಮತ್ತು ಜೀವಿಗಳಿಂದ ಕೂಡಿರುವುದೇ ಪ್ರಕೃತಿಯ ವೈಚಿತ್ರ್ಯ. ಹುಲಿಯು ಬದುಕಬೇಕಾದ ಈ ಜಗತ್ತಿನಲ್ಲೇ ಹುಲ್ಲೆಯು ಬದುಕಬೇಕಾಗಿದೆ. ಪ್ರಕೃತಿಯ ಉದ್ದೇಶವನ್ನು ನಾನಾಗಲಿ ನೀನಾಗಲಿ ಅರಿಯಲಾರೆವು. ಅದೊಂದು ಬಿಡಿಸಲಾಗದ ಕಗ್ಗಂಟು.

ಅಂಬೆ : ಹಾಗಾದರೆ, ಈ ಜಗತ್ತಿನಲ್ಲಿ ಹೆಣ್ಣಿಗೆ ರಕ್ಷಣೆಯೇ ಇಲ್ಲವೇ?

ಪರಶುರಾಮ : ಇದೆ ತಾಯಿ, ಇದೆ. ಹೆಣ್ಣು ದೈಹಿಕ ಬಲದಲ್ಲಿ ಗಂಡಿನ ಮುಂದೆ ದುರ್ಬಲಳಂತೆ ಕಂಡುಬಂದರೂ, ಆಕೆ ತನ್ನ ಮಾನಸಿಕ ಬಲದಿಂದ ಅವನೊಡನೆ ಸೆಣಸಬಲ್ಲಳು.... ಅವನಿಗಿಂತ ಮಿಗಿಲಾಗಬಲ್ಲಳು.

ಅಂಬೆ : (ಆವೇಶದಿಂದ ಚಡಪಡಿಸುತ್ತಾ)
ಗುರುವರ್ಯ, ನನಗೆ ಆ ಶಕ್ತಿಯನ್ನು ಅನುಗ್ರಹಿಸಿ. ನನ್ನ ಬಾಳಿನ ದಿಕ್ಕನ್ನು ಬದಲಿಸಿದ ಈ ಭೀಷ್ಮನನ್ನು ನಾನು ಎದುರಿಸಲೇಬೇಕು.

ಪರಶುರಾಮ : ಅಂಬೆ, ಶಾಂತಳಾಗು.

ಅಂಬೆ : ಶಾಂತಿಯೆಂಬುದು ಸಾವು ಬಂದಾಗ ಮಾತ್ರ ಸಾಧ್ಯ ಗುರುದೇವ....

(ಅಂಬೆಯ ಅಂತರಂಗದ ವೇದನೆಯೆಲ್ಲವೂ ಕ್ರೋಧರೂಪವನ್ನು ತಾಳಿ ಬಹಿರಂಗದಲ್ಲಿ ಅವಳ ಕಣ್ಣುಗಳ ಮೂಲಕ ಹೊರಹೊಮ್ಮುತ್ತಿರುವಂತೆ ಕಂಡುಬರುತ್ತಿದೆ. ದಿಟ್ಟದೃಷ್ಟಿಯಿಂದ ಭೀಷ್ಮನನ್ನೇ ನೋಡತೊಡಗುತ್ತಾಳೆ. ಭೀಷ್ಮರು ಅವಳ ದೃಷ್ಟಿಯನ್ನೆದುರಿಸಲಾರದೆ, ಗುರುಗಳ ಕಡೆ ನೋಡತೊಡಗುತ್ತಾರೆ.)

(ತೆರೆ ಮೆಲ್ಲ ಮೆಲ್ಲನೆ ಸರಿಯುತ್ತದೆ)

❍

ಬರಹಗಾರ

ಹೆಸರು : ಸಿ.ಪಿ. ನಾಗರಾಜ

ತಾಯಿ : ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

ತಂದೆ : ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಓದು : ಎಂ.ಎ., ಪಿಎಚ್.ಡಿ.

ಕೆಲಸ : ಕನ್ನಡ ಉಪನ್ಯಾಸಕ

1971-72 ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

1972-2003 ಭಾರತಿ ಕಾಲೇಜು, ಕಾಳಮುದ್ದನ ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

2006-ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ನಾಟಕ :

ಭಾಗೀರಥಿ	ಅಂಬೆ
ಹಾವು	ಅಂಗಿ ಬಟ್ಟೆ
ಒಂದು ರೂಪಾಯಿ	ಕಳ್ಳರಿದ್ದಾರೆ... ಎಚ್ಚರಿಕೆ
ಹೆಣದ ಹಣ	

ಗದ್ಯ :

ಹಳ್ಳಿಗಾಡಿನ ರೂವಾರಿ	ಡಾ.ಬಂದೀಗೌಡ
ಆಣೆ ಪ್ರಮಾಣಗಳು	ಬಯ್ಗುಳ
ಸರ್ವಜ್ಞ ವಚನಗಳ ಓದು	ಅಲ್ಲಮ ವಚನಗಳ ಓದು
ಶಿವಶರಣಶರಣೆಯರ ವಚನಗಳ ಓದು	ಶಿವಶರಣರ ವಚನಗಳ ಓದು
ಬಸವಣ್ಣ ವಚನಗಳ ಓದು	ಮುದ್ದೆಗಂಟು

ವಿಳಾಸ : ಸಿ.ಪಿ. ನಾಗರಾಜ, 75, 'ಎ' ಬ್ಲಾಕ್, 5 ನೆಯ ಕ್ರಾಸ್, ಕೃಿಷ್ಣ ಗಾರ್ಡನ್, ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521.

ngy7777@gmail.com